# ನೂಪುರ ಭ್ರಮರಿ

...ನರ್ತನ ಜಗತ್ತಿಗೊಂದು ಪರಿಭ್ರಮಣ


(ಖಾಸಗಿ ಪ್ರಸಾರಕ್ಕಾಗಿ)

ಚೈತ್ರ – ವೈಶಾಖ

ಸಂಪುಟ 3 ಸಂಚಿಕೆ 2

| | |
|---|---|
| ಸಂಪಾದಕರು | : ಮನೋರಮಾ. ಬಿ.ಎನ್ |
| ವೆಬ್‌ಸೈಟ್ ವಿನ್ಯಾಸ | : ಮಹೇಶ್ ಎಳ್ಯಡ್ಕ, ಧ್ಯೇಯ ಟೆಕ್ನಾಲಜೀಸ್, ಬೆಂಗಳೂರು. |
| ವಿತರಣಾ ಮುಖ್ಯಸ್ಥ | : ವಿಷ್ಣುಪ್ರಸಾದ್ ನಿಡ್ಡಾಜೆ |
| ಕಛೇರಿ ನಿರ್ವಹಣೆ | : ರಾಜ್‌ಗೋಪಾಲ್.ಬಿ.ಎನ್ |
| ಪ್ರಕಾಶನ | : 'ಸಾನಿಧ್ಯ', ಮಡಿಕೇರಿ |
| ಮುಖಪುಟ ವಿನ್ಯಾಸ | : ಸುನೀಲ ಕುಲಕರ್ಣಿ |
| ಪುಟ ವಿನ್ಯಾಸ ಹಾಗೂ ಮುದ್ರಣ | : ಅಕ್ಷರೋದ್ಯಮ, ಮಂಗಳೂರು |


## ಈ ಸಂಚಿಕೆಯಲ್ಲಿ .....

## ವಸಂತ ವಿಹಾರ


ಮಂಜೀರ ............................................................ 4

ರಂಗ ಭ್ರಮರಿ: 'ಥಾಟ್': ಒಂದು ಪರಿಚಯ ............................ 6

2ನೇ ವಾರ್ಷಿಕ ಸಂಭ್ರಮ ................................................ 9

ಒಳನೋಟ ............................................................ 13

ಹಸ್ತ ಮಯೂರಿ: ಚಂದ್ರಕಲಾಹಸ್ತ .................................... 15

ಲಲಿತ ಲಹರಿ :

1. ಪ್ರಳಯ ತಾಂಡವ : ವೀ. ಸೀತಾರಾಮಯ್ಯ ............................ 16

ಚುಟುಕುಗಳು – ಕುಂಬ್ಳೆ ಸುಂದರ ರಾವ್

ದೀವಟಿಗೆ : 1. ನಟನ ಮತ್ತು ರಂಗಮನೆ .................................. 17

2. ಶಿರಸಿಯಲ್ಲಿ ಮೊಟ್ಟ ಮೊದಲ ಕಥಕ್ ಡಿಪ್ಲೋಮಾ........ 18

ದರ್ಪಣ : ನೃತ್ಯ ರಂಗದ ಅನಭಿಷಿಕ್ತ ರಾಣಿ; ರುಕ್ಮಿಣಿ ........................ 19

ನಿಮ್ಮ ಬರೆಹ ನಮ್ಮ ಓದು ............................................ 22

ರಂಗಸ್ಥಳ : ಕೆಂಡ ತಂದಿಟ್ಟರೂ ಕೆಂಡವಾಗದ ನರಸಿಂಹ ಭಟ್ ........... 24

ಅಂಗಳದ ಮಾತು ತಿಂಗಳ ಚರ್ಚೆ :

ಯಕ್ಷಗಾನ ಶಿಕ್ಷಣ ಮತ್ತು ಪಾಠ ಪಟ್ಟಿ ............................ 25






## ಮಂಜೀರ

**ಮೂ**ರನೇ ವರ್ಷದ ಮೆಟ್ಟಿಲು ಏರುವ ಹಂತಕ್ಕೆ ಮುನ್ನುಡಿ ಶುಭಾಶಯಗಳ ಬೆಂಬಲ ದೊರೆತಿದೆ. ಗುರಿ ತಲುಪುವ ಹಂತದ ಪ್ರಯಾಣದ ಸುಖ–ದುಃಖಗಳು ಅನುಭವ ಹಾಗೂಅರಿವಿನ ಸಮೃದ್ಧ ಪಾಕಕ್ಕೆ ಹದವಾಗಿ ರಸ ತುಂಬುತ್ತಿದೆ. ಜೊತೆಗೆ ವರುಷ ಮುಗಿಯುವದರೊಳಗೆ ಪತ್ರಿಕೆ ರಿಜಿಸ್ಟರ್ಡ್ ಆಗಲಿದೆ ಎಂಬ ವಿಶ್ವಾಸ. ಈ ಹಂತದಲ್ಲೆಲ್ಲಾ ನೂಪುರದಂತೆಯೇ ಲಾಭದ ಉದ್ದೇಶವಿಲ್ಲದೆ ತಾವಾಗಿಯೇ ಬಂದು ಕೈಜೋಡಿಸಿ ದುಡಿಯುತ್ತಿರುವವ ಮಿತ್ರರು ಒಬ್ಬಿಬ್ಬರಲ್ಲ. ಹಾಗಾಗಿಯೇ ದಿನದಿಂದ ದಿನಕ್ಕೆ ನಮ್ಮದು ಹೊಸ ಸದಸ್ಯರನ್ನು ಹೊಂದಿಕೊಳ್ಳುತ್ತಿರುವ ಒಂದು ಕುಟುಂಬ. ನೋವು–ನಲಿವುಗಳ ನಡುವೆಯೂ ಪ್ರತಿಜ್ಞೆಯ ಹಾದಿಯೋ ಎಂಬ ಹಾಗೆ ನಸುನಕ್ಕು ಮುಂದೆ ಸಾಗುವ ಮಂದಿಯ ಬಳಗ. ಬಂಡಿಯಂತಿರುವ ಬದುಕಿನ ಚಲನೆ, ಕೂಡಿ ಬಾಳುವಲ್ಲಿ ಸಿಗುವ ಸುಖದ ಜೇನು ಪರಿಶ್ರಮವನ್ನಷ್ಟೇ ಹಿಂಬಾಲಿಸುತ್ತದೆ ಎಂಬುದು ತಿಳಿಯುವುದು ಹೀಗಿದ್ದಾಗಲೇ ನೋಡಿ !

ಒಂದು ಕಾಲದಲ್ಲಿ ಸಾಮಾನ್ಯ ಜನರ ಅಭಿವ್ಯಕ್ತಿಯ ಸಾಧನವಾಗಿದ್ದದ್ದು ಜನಪದ ಮತ್ತು ಜಾನಪದ ನೃತ್ಯಗಳು. ಕಾಲಕ್ರಮೇಣ ಹಲವು ಬದಲಾವಣೆಗಳಿಗೆ ಒಗ್ಗಿಸಿಕೊಂಡು ಒಂದು ಸಿದ್ಧ ಪರಂಪರೆಯ ರೂಪಕ್ಕೆ ಬಂದವು. ಲೋಕಧರ್ಮಿಯ ವಿಶಾಲತೆಯಿಂದ ನಾಟ್ಯಧರ್ಮಿಯ ಚೌಕಟ್ಟಿಗೆ ಒಳಪಟ್ಟವು.

ಉಗಮವಾದಾಗಿನಿಂದಲೂ ಶತಶತಮಾನಗಳಿಗೂ ನೃತ್ಯವು ಸಾಕ ಷ್ಟು ಚಲನೆಗಳಿಗೆ ಸಾಕ್ಷಿಯಾಗಿದೆ. ನಿತ್ಯನೈಮಿತ್ತಿಕ ಚಟುವಟಿಕೆಗಳ ಭಾಗವೋ ಎಂಬಂತಿದ್ದ ನೃತ್ಯಗಳು ಕ್ರಮೇಣ ಪೂಜಾ ಮಂದಿರ, ರಾಜರ ಆಶ್ರಯಗಳಲ್ಲಿ ಪ್ರವರ್ಧಮಾನಕ್ಕೆ ಬಂದು ವಿವಿಧ ಪದವಿಗಳನ್ನು, ಜೊತೆಗೆ ಸಾಕಷ್ಟು ಏಳು ಬೀಳುಗಳನ್ನು ಕಂಡಿತ್ತು. ಕ್ರಮೇಣ ಸ್ವಹಿತಾಸಕ್ತಿ, ಕಾಮ–ಮದ–ಮಾತ್ಸರ್ಯಗಳೇ ಆವರಿಸಿಕೊಂಡರೂ ಹಲಕೆಲವು ಮಹಾನುಭಾವರ ಸುಧಾರಣೆಯ ಫಲವಾಗಿ ಆಗಾಗ್ಗೆ ಅಂಟಿದ್ದ ಕಳಂಕವನ್ನು ತೊಡೆದುಕೊಳ್ಳುತ್ತಿತ್ತು.

ಆದರೆ ಈ ಕಾಲಕ್ಕೆ ಇವ್ಯಾವುದರ ಸಂಗತಿಯ ಕಲಿಕೆಯೂ ಬೇಡ..,ಬೇಕಿದ್ದರೂ ಪರೀಕ್ಷೆ ಸಮಯಗಳಿಗೆ ಮಾತ್ರ ! ಅರಿವಿನ ಕಿಚ್ಚು ಹಚ್ಚುವುದೇನಿದ್ದರೂ ಕೆಲ ಸಮಯಕ್ಕೆ ! ಉದ್ಯೋಗಕೇಂದ್ರಿತಗೊಳ್ಳುವ ಶಿಕ್ಷಣ ನೀಡುವ ಫಲಶ್ರುತಿಯೇ ಇದು ! ಇದಕ್ಕೀಗ ಕಲೆಯೂ ಹೊರತಾಗಿಲ್ಲ.

ಉದಾಸೀನತೆಯಾಗಿದ್ದರೆ ಒಂದಷ್ಟು ಹರಕೆ ಸಂದಾಯ ಮಾಡಿಯೋ; ನೃತ್ಯವೆಂಬುದು ಪ್ರದರ್ಶಕ ಕಲೆಯಾದ್ದರಿಂದ ಪ್ರದರ್ಶನಕ್ಕೆ ಪ್ರಥಮ ಅವಕಾಶ ಎಂದೋ ; ಘನಸ್ತಿಕೆಯನ್ನು ತೋರಿಸಿಕೊಳ್ಳುವ ನೆವದಲ್ಲಿ ನಿರ್ಲಕ್ಷ್ಯ ತೋರಿಯೋ.., ಒಟ್ಟಿನಲ್ಲಿ ನಮ್ಮಲ್ಲಡಗಿದ ಕೊರತೆಯನ್ನು ಮರೆಮಾಚಲು ಕಲೆಯ ವಿರುದ್ಧ ಅರಿವಿದ್ದೋ, ಇಲ್ಲದೆಯೋ ಬ್ರಹ್ಮಾಸ್ತ್ರವನ್ನಂತೂ ಬಳಸಿರುತ್ತೇವೆ. ಕಾರಣ, ನಮ್ಮ ದಟ್ಟ ಇತಿಹಾಸದ ಕಲ್ಪನೆಯನ್ನು ತಮ್ಮದಾಗಿಸಿಕೊಳ್ಳುವ ಕನಿಷ್ಠ ಪ್ರಯತ್ನವೂ ನಮ್ಮಿಂದಾಗುತ್ತಿಲ್ಲ. ಹಾಗಾಗಿ ಅಪೂರ್ವ ಸಂಪತ್ತಿನ ಕುರಿತಾದ ಮೌಲಿಕ ಸಂಶೋಧನೆಗಳೂ, ಅಧ್ಯಯನಗಳೂ ಬರಬರುತ್ತಾ ಅಪರೂಪವಾಗುತ್ತಿವೆ. ಸಾಕಷ್ಟು ಪಠ್ಯಗಳು ತಿರುಚಲ್ಪಡುತ್ತಿವೆ.

ಅದರಲ್ಲೂ, ಕ್ರಮಿಸಬೇಕಾದ ಹಾದಿ ಇನ್ನೂ ಬಹುದೂರವಿರುವಾಗಲೇ ಎಲ್ಲವನ್ನೂ ಸಾಧಿಸಿಕೊಂಡವರಂತೆ ಬೀಗುವ ಗುರುಗಳು, ಕಲಾವಿದರು, ವಿದ್ಯಾರ್ಥಿಗಳು ಕ್ರಮೇಣ ಆಧಾರಸ್ತಂಭವಾದ ಜನಪದವನ್ನು ತಮ್ಮ ಫ್ಯೂಷನ್ನಿಗೋ, ಫ್ಯಾಶನ್ನಿಗೋ ವಸ್ತುವನಾಗಿಸಿಕೊಳ್ಳುತ್ತಿದ್ದಾರೆಯೇ ವಿನಃ, ಅದರ ಅಂತಃಕರಣವನ್ನು ಅರಿಯುವ ದಿಸೆಯಲ್ಲಿ ಪ್ರಯತ್ನಗಳಾಗುತ್ತಿರುವುದು ತೀರಾ ಬೆರಳೆಣಿಕೆಯಷ್ಟು ಎಂಬಂತೆ !

ಪರಿಣಾಮ, ! ಕಲೆ ನಲುಗುತ್ತದೆ; ಇತಿಹಾಸದ ಕೊಂಡಿಗಳು ಕಳಚಿಕೊಳ್ಳುತ್ತವೆ, ಕೊನೆಗೊಂದು ದಿನ ಉದ್ದೇಶಪೂರ್ವಕವಾಗಿ ಮರೆಯಾಗಿ ತಿರುಚಿಗೊಳ್ಳುತ್ತವೆ. ಈಗಾಗಲೇ ಜನಪದವನ್ನೂ ಒಳಗೊಂಡಂತೆ ಕಲೆ-ಕಲೆಗಳ ನಡುವೆ ಸಂಧಿಸಲಾಗದ ಕಂದಕವೊಂದು ಬೆಳೆಯುತ್ತಿದೆ. ಒಂದು ಕಾಲಕ್ಕೆ ಗೆಜ್ಜೆ ಕಟ್ಟುವುದೇ ಅಪರಾಧ ! ಅದೇ ಈಗ ನೃತ್ಯವೆಂಬುದು ಮಾರುಕಟ್ಟೆಯಲ್ಲಿ ಬಿಕರಿಗಾಗಿ ಇಟ್ಟಿರುವ ವಸ್ತು ! ಎಂಥ ಗಮನಾರ್ಹ ಬದಲಾವಣೆಯಲ್ಲವೇ ?

ಇವೆಲ್ಲವೂ ನಮ್ಮ ಸ್ವಯಂಕೃತ ಅಪರಾಧಕ್ಕೆ ಸಿಗುವ ಪ್ರತಿಫಲ.

ಕನಿಷ್ಠಪಕ್ಷ ಅದಕ್ಕಾದರೂ ಒಂದಷ್ಟು ಅಪರಾಧೀಪ್ರಜ್ಞೆ ಉಳಿಯಬಹುದೇ?

ಕಲೆಯಿಂದ ಸಾಕಷ್ಟು ಪಡೆಯುತ್ತೇವೆ. ಜೀವನ ಹಸನು ಮಾಡಿಕೊಳ್ಳುತ್ತೇವೆ. ವರ್ತಮಾನ, ಭವಿಷ್ಯವನ್ನೆಲ್ಲಾ ಉದ್ಧಾರ ಮಾಡಿಕೊಂಡು ಪ್ರತಿಷ್ಠಿತರಾಗುತ್ತೇವೆ. ಬದಲಾಗಿ ಕಲೆಗಾಗಿ ನಾವು ಸಲ್ಲಿಸಿದ ಕಾಣಿಕೆಯೇನು ? ಮುಂದಿನ ಪೀಳಿಗೆಗೆ ನಾವು ಕೊಡುವ ಕೊಡುಗೆಯೇನು ? ಒಟ್ಟಿನಲ್ಲಿ ಪ್ರತಿಷ್ಠೆ, ಸಂಪಾದನೆಗಾಗಿ ನಾವು ಕೊಡುವ ಸಮಾಯಸಮಯ, ಸಂದರ್ಭಾನುಸಾರ ಪ್ರಜ್ಞೆಯಿಲ್ಲದ ಪ್ರಯೋಗಗಳು, ಪ್ರದರ್ಶನಗಳು, ಕಾರ್ಯಕ್ರಮಗಳು ಕಲೆಯ ಮೂಲಸೆಲೆಯನ್ನು ಬತ್ತದಂತೆ ಮಾಡದಿದ್ದರೆ ಸಾಕು !

ಚಲನಶೀಲತೆ ಕಲೆಗಳ ಹುಟ್ಟಾ ಪ್ರವೃತ್ತಿ. ಆದರೆ ಅದರ ಮೂಲ ಪರಿಚಯವಿಲ್ಲದೆ ಮಾಡುವ ಚಲನೆಗಳು ಮಾತ್ರ ಪೂರ್ಣ ನಿಷ್ಕ್ರಿಯರನ್ನಾಗಿಸುತ್ತವೆ.

ಈಗಾಗಲೇ ಭಾರತದ ಇತ್ತೀಚಿನ ಇತಿಹಾಸದುದ್ದಕ್ಕೂ ಇತಿಹಾಸವನ್ನೇ ತಿರುಚಲ್ಪಡುವ ಸಾಕಷ್ಟು ಸಂಗತಿಗಳನ್ನು ಅನುಭವಿಸಿದ್ದೇವೆ. ಈ ಸಂದರ್ಭ ಕಲೆಗಳಲ್ಲೂ ವ್ಯಾಪಕವಾಯಿತೆಂದರೆ ಕೊಡಲಿಯೇಟು ಬೀಳುತ್ತಿರುವ ಅರಿವಿಲ್ಲದ ಈಗಿನ ಪೀಳಿಗೆಯು ಮುಂದೊಂದು ದಿನ ಅಸ್ತಿತ್ವವನ್ನೇ ಮಾರಿ ಕೊಂಡೀತು ! ಕೊನೆಗೆ ಬೇರೊಂಡೆಡೆ ಹುಡುಕಬೇಕಾದರೂ ಅದರ ಅವಕಾಶವೇ ಇಲ್ಲದಿದ್ದರೇ !!!?

ನಮ್ಮ ಬುಡಕ್ಕೆ ನಾವಿಟ್ಟುಕೊಳ್ಳುತ್ತಿರುವ ಬೆಂಕಿ ಕೊಳ್ಳಿ !

'ದೇಶ ನಿಮಗೆ ಏನು ನೀಡಿದೆ ಎಂಬುದಕ್ಕಿಂತ ನೀವು ದೇಶಕ್ಕೆ ಏನು ನೀಡಿದ್ದೀರಿ ಎಂಬುದು ಮುಖ್ಯ. ಏಕೆಂದರೆ ನೀವು ಬದುಕುತ್ತಿರುವುದೇ ನಿಮ್ಮ ಮಣ್ಣಿನಿಂದ.' ಅಂತೆಯೇ ಕಲೆಯೂ ಕೂಡಾ!

ಕೈಯಲ್ಲಿರುವ ಬೆಣ್ಣೆಯನ್ನು ಮಣ್ಣುಪಾಲು ಮಾಡಿ ತುಪ್ಪ ಬೇಕೆಂದರೆ ಬೆಪ್ಪರಾಗಬೇಕಾದೀತು ! ಎಚ್ಚರವಿರಲಿ !

ಪ್ರೀತಿಯಿಂದ,

✍ ಸಂಪಾದಕರು





ರಂಗ-ಭ್ರಮರಿ

# 'ಥಾಟ್': ಒಂದು ಪರಿಚಯ

● ಅನೂಪಾ ಭಟ್., ಶಿರಸಿ

ಗಾಯನದ ಅಧೀನ ವಾದನ. ವಾದನದ ಅಧೀನ ನರ್ತನವಾಗಿದೆ. ಆದ್ದರಿಂದ ಈ ಕಲೆಗಳಲ್ಲಿ ಗಾಯನಕ್ಕೇ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗುತ್ತದೆ.

ಗಾಯನಕ್ಕೆ ಸಪ್ತ ಸ್ವರಗಳೇ ಆಧಾರ. ಸ,ರಿ,ಗ,ಮ,ಪ,ದ,ನಿ. ಅವುಗಳಲ್ಲಿ ರೆ,ಗ,ಮ,ದ,ನಿ ಸ್ವರಗಳು ಸ್ಥಾನ ಪಲ್ಲಟಗೊಳ್ಳುವದರಿಂದ ಈ ಸ್ವರಗಳನ್ನು ವಿಕೃತ ಸ್ವರಗಳೆನ್ನುವರು. ಸ ಮತ್ತು ಪ ಅಂದರೆ ಷಡ್ಜ, ಪಂಚಮಗಳು ಅಚಲ ಸ್ವರಗಳು. ಅವು ಪ್ರಕೃತಿ ಸ್ವರಗಳು.

ಹಿಂದೂಸ್ತಾನೀ ಸಂಗೀತ ಪದ್ಧತಿಯಲ್ಲಿ ಸ್ವರಗಳಾದ ರೆ,ಗ,ದ,ನಿ ತನ್ನ ಸ್ಥಾನದಿಂದ ಕೊಂಚ ಕೆಳಗಿಳಿದಾಗ 'ಕೋಮಲ' ಸ್ವರಗಳೆನಿಸಿಕೊಳ್ಳುತ್ತವೆ. (ಕರ್ನಾಟಕ ಸಂಗೀತದ ಸ್ವರ 'ರಿ' ಇದ್ದದ್ದು ಹಿಂದೂಸ್ಥಾನಿಯಲ್ಲಿ 'ರೆ' ಎಂದು ಕರೆಯಲ್ಪಡುತ್ತದೆ.) 'ಮ' ತನ್ನ ಸ್ಥಾನದಿಂದ ಸ್ವಲ್ಪ ಮೇಲೇರಿ ತೀವ್ರ 'ಮ' ಎನಿಸಿಕೊಳ್ಳುತ್ತದೆ. ಸಂಗೀತದಲ್ಲಿ ನಾದದಿಂದ ಶ್ರುತಿ, ಶ್ರುತಿಯಿಂದ ಸ್ವರ, ಸ್ವರದಿಂದ ಸಪ್ತಕದ ಉತ್ಪತ್ತಿಯಾಗುತ್ತದೆ.ಸಪ್ತಕದ ಶುದ್ಧ , ಕೋಮಲ, ತೀವ್ರ ಸ್ವರಗಳು ಸೇರಿ 12 ಸ್ವರಗಳಾಗುತ್ತವೆ.

**ಥಾಟ್;**

ಸಪ್ತ ಸ್ವರಗಳು ವಿವಿಧ ಕ್ರಮಗಳಲ್ಲಿ ಒಂದಾದಾಗ ಆ ಒಂದೊಂದು ಸಮುದಾಯದಿಂದ ರಾಗಗಳು ಜನಿಸುತ್ತವೆ. ಇಂತಹ ಸಮುದಾಯದ ಸ್ವರ ಸಮೂಹವನ್ನು 'ಥಾಟ್'ಎನ್ನುವರು. ಇದಕ್ಕೆ 'ಮೇಳ' ಎಂಬ ಹೆಸರೂ ಇದೆ. ಇವೆಲ್ಲವೂ ಆಧಾರವೆನಿಸುವ ಜನಕ ರಾಗಗಳು. ಯಾವ ಥಾಟ್‌ನಿಂದ ಅಥವಾ ಸ್ವರ ಸಮುದಾಯದಿಂದ ರಾಗದ ಉತ್ಪತ್ತಿಯಾಗುವುದೋ ಆ ರಾಗವನ್ನು ಥಾಟ್ ರಾಗ ಅಥವಾ ಜನ್ಯರಾಗ ಎನ್ನುವರು.

**ಥಾಟ್ ನಿಯಮ;**

1)ಥಾಟ್ ಯಾವಾಗಲೂ ಸಂಪೂರ್ಣವಾಗಿರುತ್ತದೆ. ಒಂದು ವೇಳೆ ಏಳೂ ಸ್ವರಗಳೂ ಇಲ್ಲದಿದ್ದರೆ, ಅದು ಏಳು ಸ್ವರಗಳ ರಾಗವನ್ನು ಉತ್ಪನ್ನ ಮಾಡಲಾರದು. ಹಾಗಾಗಿ ಥಾಟ್‌ನಲ್ಲಿ ಏಳೂ ಸ್ವರಗಳೂ ಇರಬೇಕು.

2)ಸಪ್ತಕದ ಏಳೂ ಸ್ವರಗಳೂ ಕ್ರಮಾನುಸಾರವಾಗಿಯೇ ಇರಬೇಕು.

3)ಥಾಟ್ ಆಗಲು ಆರೋಹವಿದ್ದರೆ ಸಾಕು. ಅವರೋಹದ ಅವಶ್ಯಕತೆ ಇರದು.

4)ಥಾಟ್‌ನಲ್ಲಿ ರಂಜಕತೆಯ ಅಗತ್ಯ ಇಲ್ಲ. ಅದು ರಾಗದಲ್ಲಿರುತ್ತದೆ .ಏಕೆಂದರೆ ರಾಗವು ಹಾಡಲ್ಪಡುತ್ತದೆ. ಥಾಟ್ ಹಾಡಲ್ಪಡುವದಿಲ್ಲ.

**10 ಥಾಟ್‌ಗಳು ;**

ಹಿಂದೂಸ್ಥಾನೀ ಸಂಗೀತ ಪದ್ಧತಿಯಲ್ಲಿ 10 ಥಾಟ್‌ಗಳಿವೆ. ಪಂ.ವಿಷ್ಣು ನಾರಾಯಣ ಭಾತ್‌ಖಂಡೆ

ಅವರಿಂದ ಹಿಂದೂಸ್ತಾನೀ ರಾಗಗಳು ಬಂಧಿಸಲ್ಪಟ್ಟಿವೆ. ಅವು ಹೀಗಿವೆ, ಯಮನ್, ಬಿಲಾವತ್, ಖಮಾಜ್, ಆಸಾವರಿ, ಭೈರವಿ, ತೋಡಿ, ಭೈರವ, ಪೂರ್ವಿ, ಮಾರವಾ, ಕಾಫಿ.

**ಥಾಟ್ ನ ಸ್ವರೂಪ:**

**ಥಾಟ್**

| | | |
|---|---|---|
| 1. ಯಮನ್ | 2. ಬಿಲಾವತ್ | 3. ಖಮಾಜ್ |
| 4. ಆಸಾವರಿ | 5. ಭೈರವಿ | 6. ತೋಡಿ |
| 7. ಭೈರವ | 8. ಪೂರ್ವಿ | 9. ಮಾರವಾ |
| 10. ಕಾಫಿ | | |



15ನೇ ಶತಮಾನದ ಅಂತ್ಯದಲ್ಲಿ 'ರಾಗ ತರಂಗಿಣಿ' ಬರೆದ 'ಲೋಚನ ಕವಿ'ಯು ರಾಗಗಳ ವರ್ಗೀಕರಣದ ಪರಂಪರಾಗತ ಶೈಲಿಯಾದ ಗ್ರಾಮ ಮೂರ್ಛನೆಗಳ ಪರಿಷ್ಕರಣೆ ಮಾಡಿ, 'ಮೇಳ' ಅಥವಾ 'ಥಾಟ್' ಎಂಬ ಕಲ್ಪನೆಯನ್ನು ಮುಂದಿಟ್ಟನು. ಲೋಚನ ಕವಿಯ ಲೇಖನದ ಅನುಸಾರ ಆ ಸಮಯದಲ್ಲಿ 1600 ರಾಗಗಳಿದ್ದವು. .17ನೇ ಶತಮಾನದಲ್ಲೇ ಥಾಟ್‌ನ ಅಂತರ್ಗತ ರಾಗಗಳ ವರ್ಗೀಕರಣ ಪ್ರಚಾರವಾಗಿಬಿಟ್ಟಿತ್ತು ಎಂಬ ಉಲ್ಲೇಖವು, ಆ ಸಮಯದ ಪ್ರಸಿದ್ಧ ಗ್ರಂಥಗಳಾಗಿದ್ದ 'ಸಂಗೀತ ಪಾರಿಜಾತ' ಹಾಗೂ 'ರಾಗ ವಿಬೋಧ'ಗಳಲ್ಲಿ ಸಿಗುತ್ತದೆ.

17ನೇ ಶತಮಾನದ ಅಂತ್ಯದ ವರೆಗೆ ಥಾಟ್‌ನ ಸಂಖ್ಯೆಗೆ ಸಂಬಂಧಪಟ್ಟಂತೆ ಬಹಳ ಮತ ಬೇಧಗಳಿದ್ದವು. 'ಶ್ರೀನಿವಾಸ'ನು ಮೇಳದ ಲಕ್ಷಣ ವಿವರಣೆ ಮಾಡುತ್ತಿರುವಾಗ 'ರಾಗದ ಉತ್ಪತ್ತಿಯು ಥಾಟ್‌ನಿಂದಾಗುತ್ತದೆ. ಥಾಟ್‌ನಲ್ಲಿ 3 ರೂಪಗಳಾಗಿರಬಹುದು. ಅವು ಔಢವ, ಷಾಢವ, ಸಂಪೂರ್ಣ' ಎಂದನು. ಆದರೆ ಈಗ ಸಂಪೂರ್ಣ ಅಂದರೆ ಸಪ್ತ ಸ್ವರಗಳೂ ಇದ್ದರೆ ಮಾತ್ರ ಥಾಟ್ ಎಂದು ನಿರ್ಧರಿಸಲಾಗಿದೆ.

ವಿವಿಧ ಗ್ರಂಥಗಳ ಪ್ರಕಾರ, ರಾಗ ವಿಬೋಧದ ಲೇಖಕ 23 ಥಾಟ್ ಎಂದೂ, ಸ್ವರ ಮೇಳ ಕಲಾನಿಧಿಯ ಲೇಖಕ 20 ಥಾಟ್ ಎಂದೂ , ಚತುರ್ದಂಡಿ ಪ್ರಕಾಶಿಕಾದಲ್ಲಿ ಲೇಖಕ 19 ಥಾಟ್ ಎಂದೂ ಹೇಳಿರುವನು. ನಂತರ 19 ನೆಯ ಶತಮಾನದಲ್ಲಿ ಸ್ವಪಂ.ವಿಷ್ಣು ನಾರಾಯಣ ಭಾತ್ ಖಂಡೆಯವರು ಆಳವಾದ ಅಧ್ಯಯನ ನಡೆಸಿ 10 ಥಾಟ್ ಗಳನ್ನು ನೀಡಿದರು. ಸಂಗೀತ ಜಗತ್ತಿಗೆ ಇದು ಬಹಳ ಅನುಕೂಲವಾಯಿತು.

ಇದನ್ನು ಹೊರತುಪಡಿಸಿದರೆ ಇಂದಿಗೂ ಥಾಟ್‌ಗೆ ಸಂಬಂಧಿಸಿದಂತೆ ವಾದ ವಿವಾದಗಳು ನಡೆಯುತ್ತಲೇ ಇವೆ. ಕಾರಣವೆಂದರೆ, ಬಹಳಷ್ಟು ರಾಗಗಳು ಈ 10 ಥಾಟ್‌ಗಳ ಅಂತರ್ಗತ ಇಡಲಾಗದಂಥವೂ ಇವೆ. ಆದ್ದರಿಂದ ಥಾಟ್‌ಗಳ ಸಂಖ್ಯೆ ಹೆಚ್ಚಿಸುವ ಅವಶ್ಯಕತೆ ಉಂಟಾಗಿದೆ. ಇದರ ಪ್ರಯತ್ನ ನಡೆದಿದೆ. ಸರ್ವಮಾನ್ಯ ಪರಿಹಾರದ ಅನ್ವೇಷಣೆಯಾಗಬೇಕಿದೆ.

**(ಲೇಖಕಿ : ಆಕಾಶವಾಣಿಯ 'ಬಿ ಹೈ' ಕಲಾವಿದೆ, ಬಿ. ಎ. ಅಂತಿಮ ವರ್ಷದ ವಿದ್ಯಾರ್ಥಿನಿ)**





**ಪತ್ರಿಕೆಯ ಬಳಗದವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಮೇಲ್ವಿಚಾರಣೆಯನ್ನು ನಿರ್ವಹಿಸುವವರ ಹೆಸರುಗಳು ಕೆಳಗಿನಂತಿವೆ. ಆಸಕ್ತ ಓದುಗ, ಕಲಾವಿದರು ಕೆಳಕಂಡವರನ್ನು ಸಂಪರ್ಕಿಸಿ ಪತ್ರಿಕೆಯ ಚಂದಾದಾರರಾಗಬಹುದು, ಮುದ್ರಣ ನಿಧಿಗೆ ಸಹಕರಿಸಬಹುದು, ಪತ್ರಿಕೆ ಮತ್ತು ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಿಕೊಳ್ಳಬಹುದು. ಹೆಸರು ನೋಂದಾಯಿಸಿ ಬಳಗದವರಾಗಬಹುದು.**

**ವಿಷ್ಣುಪ್ರಸಾದ್ ನಿಡ್ಡಾಜೆ,** ದ.ಕ. (ಮೊಬೈಲ್ : 99640 28415)
**ಪಂಕಜ್ ಸವಣೂರು,** ಪುತ್ತೂರು (ಸಿ.ಡಿ. ಮತ್ತು ಪುಸ್ತಕ ವಿತರಕರು) (ಮೊಬೈಲ್ : 94804 81438)
**ಪರಶುರಾಮ ಕಾಮತ್,** ಕುಂದಾಪುರ. (ಮೊಬೈಲ್ : 98446 14752)
**ಎನ್.ವಿ.ವೈದ್ಯ,** ಶಿರಸಿ (ಮೊಬೈಲ್ : 94499 87250)
**ಸಂಜಯ್ ಭಟ್ ಬೆಣ್ಣೆ,** ಉತ್ತರಕನ್ನಡ (ಮೊಬೈಲ್ : 94489 18505)
**ಸಿ. ಎಸ್. ರಾಮಚಂದ್ರ ಹೆಗಡೆ,** ಬೆಂಗಳೂರು. (ಮೊಬೈಲ್ : 99663 72503)
**ಸುನೀಲ್ ಕುಲಕರ್ಣಿ,** ಮಂಗಳೂರು (ಮೊಬೈಲ್ : 98805 43783)
**ಪ್ರೊ. ವೆಂಕಟೇಶ ಪೈ,** ಮುಂಬೈ (ಮೊಬೈಲ್ :098699 21397)
**ರಾಧಿಕಾ ವಿಟ್ಲ,** ಚೆನ್ನೈ (ಮೊಬೈಲ್ :94447 05842)
**ರಾಜಗೋಪಾಲ್,** ಮಡಿಕೇರಿ (ಮೊಬೈಲ್ :99647 91328)

## ನಮ್ಮ ಬಳಗದ ಮತ್ತಷ್ಟು ಮಂದಿ...

**ವಿನಾಯಕ ಭಟ್ಟ ಮುರೂರು,** ಪತ್ರಕರ್ತರು, ಅಂಕಣಕಾರರು, ವಿಜಯಕರ್ನಾಟಕ ದೈನಿಕ, ದೆಹಲಿ.
**ಮಂಟಪ ಪ್ರಭಾಕರ ಉಪಾಧ್ಯಾಯ,** ಏಕವ್ಯಕ್ತಿ ಯಕ್ಷಗಾನ ಸಾಮ್ರಾಟರು, ಬೆಂಗಳೂರು.
**ಚಂದ್ರಶೇಖರ ಶೆಟ್ಟಿ,** ರಾಜ್ಯ ಯಕ್ಷಗಾನ ಅಕಾಡೆಮಿ ಸದಸ್ಯರು ಮತ್ತು ಭರತನೃತ್ಯ ಸಭಾ ಹಾಗೂ ಸನಾತನ ನಾಟ್ಯಾಲಯದ ಅಧ್ಯಕ್ಷರು
**ವಿದುಷಿ ಶಾರದಾಮಣಿ ಶೇಖರ್,** ನೃತ್ಯ ನಿರ್ದೇಶಕಿ, ಸನಾತನ ನಾಟ್ಯಾಲಯ, ಮಂಗಳುರು.
**ಶ್ರೀನಿವಾಸ ದೇಶಪಾಂಡೆ,** ಹಿರಿಯ ಪ್ರಬಂಧಕರು, ಕರ್ನಾಟಕ ಬ್ಯಾಂಕ್,ಮಂಗಳೂರು.
**ವಿದುಷಿ ಪಾವನಾ ರಾಜೇಂದ್ರ,** ನಿರ್ದೇಶಕರು, ಶಾರದಾ ನೃತ್ಯಾಲಯ, ಉಡುಪಿ.
**ನರೇಶ್ ಶೆಣೈ,** ಮಂಗಳೂರು.
**ರಾಕೇಶ್ ಕುಮಾರ್ ಕಮ್ಮಜೆ,** ಯುವ ಪತ್ರಕರ್ತ, ಮೈಸೂರು.
**ವೀಣಾ ಎಂ. ಸಾಮಗ, ನಿರ್ದೇಶಕರು,** ಶ್ರೀ ರಾಧಾಕೃಷ್ಣ ನೃತ್ಯ ನಿಕೇತನ, ಉಡುಪಿ
**ಅನುಶ್ರೀ ಬಂದಾಡಿ,** ಬಿಎಸ್ಸಿ ವಿದ್ಯಾರ್ಥಿನಿ, ಮಂಗಳೂರು
**ಸಂಪತ್ ಕುಮಾರ್,** ವ್ಯವಸ್ಥಾಪಕರು, ತಲಕಾವೇರಿ-ಭಾಗಮಂಡಲ ದೇವಸ್ಥಾನಗಳ ಆಡಳಿತ ಮಂಡಳಿ, ಕೊಡಗು
**ಕು. ಗೋಪಾಲ ಭಟ್ಟ (ಕು.ಗೋ),** ಹಾಸ್ಯ ಸಾಹಿತಿಗಳು, ಪುಸ್ತಕ ಪ್ರೇಮಿ, 'ಸುಹಾಸಂ', ಉಡುಪಿ.



***ಸಂಚಿಕೆಗಾಗಿ ಸಹಕರಿಸಿದವರು***

**ಸಂಪತ್ ಕುಮಾರ್**

**ವ್ಯವಸ್ಥಾಪಕರು**

**ತಲಕಾವೇರಿ-ಭಾಗಮಂಡಲ ದೇವಸ್ಥಾನಗಳ ಆಡಳಿತ ಮಂಡಳಿ, ಕೊಡಗು**

# ವರುಷವೆರಡು ಕಳೆದಿದೆ...

2ನೇ ವಾರ್ಷಿಕ ಸಂಭ್ರಮ

# ಶಿಶಿರ ಶೃಂಗಾರದಲ್ಲಿ ವಸಂತ ವಿಹರಿಸಿದೆ...



**ಅದೊಂದು ರೀತಿಯಲ್ಲಿ ಬಯಸದೇ ಒಲಿದು ಬಂದ ಭಾಗ್ಯ !!!**

ಎರಡು ವಸಂತಗಳನ್ನು ಪೂರೈಸಿ ಮೂರನೇ ಸಂವತ್ಸರಕ್ಕೆ ಕಾಲಿಡುವ ಹೊತ್ತಿಗೆ ಅಂತಹುದೊಂದು ಶುಭಾರಂಭ ಒದಗೀತು ಎಂಬುದನ್ನು ನೂಪುರ ಭ್ರಮರಿಯ ಬಳಗದ ಯಾವ ಮಿತ್ರರೂ ಕಲ್ಪಿಸಿಯೂ ಇರಲಿಲ್ಲ. ಏಕೆಂದರೆ ಕಳೆದ ವರ್ಷದಂತೆ ಒಂದು ವರ್ಷ ಪೂರೈಸಿದ ಪ್ರಯುಕ್ತ ಮಿತ್ರರೆಲ್ಲಾ ಒಟ್ಟಾಗಿ ವಾರ್ಷಿಕ ಸಂಭ್ರಮವನ್ನು ಆಚರಿಸಿಕೊಂಡು, ವೆಬ್‌ಸೈಟ್ ಅನಾವರಣಗೊಳಿಸಿದಂತ ಯಾವುದೇ ನೆವವೂ ಈ ವರ್ಷದ ಪ್ರಾರಂಭಕ್ಕೆ ಇರಲಿಲ್ಲ. ಬಳಗದ ಕುಟುಂಬ ಸಾಕಷ್ಟು ಹಿರಿದಾಗುತ್ತಿದ್ದರೂ ಈ ವರ್ಷಕ್ಕೆ ಅಂತಹ ಸಮಾರಂಭ ಮಾಡುವ ಇರಾದೆ ಯಾರಿಗೂ ಇರಲಿಲ್ಲವೆನ್ನಬಹುದೇನೋ ! ಹಾಗಾಗಿ ಬಳಗದ ಪ್ರಮುಖರು ಸಭೆ ಸೇರಿ ಒಕ್ಕೊರಲಿನಿಂದ ತೀರ್ಮಾನಿಸಿದ್ದು, ಸಮಾರಂಭದ ಬದಲಾಗಿ ಪತ್ರಿಕೆಗೆ ಒಂದು ಹೊಸ ವಿನ್ಯಾಸ ಮತ್ತು ಶೈಲಿ ನೀಡೋಣ ಮತ್ತು ಪತ್ರಿಕೆಯ ಪ್ರಸಾರದ ದಿಕ್ಕನ್ನು ಮತ್ತಷ್ಟು ವಿಶಾಲವಾಗಿಸೋಣ ಎಂದಷ್ಟೇ. ಆದ್ದರಿಂದ ಎಲ್ಲರ ಗಮನವೂ ಇದ್ದದ್ದು ಗುಣಮಟ್ಟದ ಲೇಖನಗಳು ಮತ್ತು ವರ್ಣಮಯ ಮುದ್ರಿತ ಸಂಚಿಕೆಯೆಡೆಗೆ !

ಆದರೆ ಅಯಾಚಿತವಾಗಿ, ಕಾಕತಾಳೀಯವೋ ಎಂಬಂತೆ ಒದಗಿ ಬಂದಿತ್ತು ಭವ್ಯ ವೇದಿಕೆಯಲ್ಲಿ ಎರಡನೇ ವರ್ಷ ಪೂರ್ಣಗೊಳಿಸಿದ ಸಂಭ್ರಮವನ್ನು ಆಚರಿಸಿಕೊಳ್ಳುವ ಅವಕಾಶ. ಅದೂ ಎಷ್ಟು ಕಡಿಮೆ ಅವಧಿಯಲ್ಲಿ ಎಂದರೆ ಹಿಂದಿನ ದಿನ ರಾತ್ರಿ ನಿಗದಿಯಾಗಿ, ಬಳಗದ ಎಲ್ಲರಿಗೂ ಸರಿಯಾಗಿ





ವಿಚಾರ ತಿಳಿಸದಷ್ಟೂ ಅವಸರವಸರವಾಗಿ !

ನೂಪುರ ಭ್ರಮರಿಯ ಪ್ರಥಮ ಸಂಚಿಕೆ ಅನಾವರಣಗೊಂಡದ್ದು 2007 ಫೆಬ್ರವರಿಯ ಶಿವರಾತ್ರಿಯಂದು. ಮೊನ್ನೆ ಮೊನ್ನೆ ಕಣ್ಬಿಟ್ಟಳೋ ಎಂಬಂತಿರುವಾಗಲೇ ವಾರ್ಷಿಕ ಸಂಭ್ರಮ 2008ರ ಫೆಬ್ರವರಿ 10ಕ್ಕೆ. ಮೂರನೇ ವರ್ಷಕ್ಕೆ ಪಾದಾರ್ಪಣೆ ಮಾಡುವ ಹೊತ್ತಿಗೆ ಸ್ತ್ರೀ ವೇಷ ಚತುರ ಮಂಟಪ ಪ್ರಭಾಕರ ಉಪಾಧ್ಯರ ಮುಖಪುಟ, ಸಂದರ್ಶನ ಹೊತ್ತ ವಾರ್ಷಿಕ ಸಂಚಿಕೆ ತೆರೆದುಕೊಂಡದ್ದು ಫೆಬ್ರವರಿ 13, 2009. ಅದೂ ಭರತನೃತ್ಯ ಸಭಾದ ಆಶ್ರಯದಲ್ಲಿ ಮಂಗಳೂರಿನಲ್ಲಿ ಮೊದಲ ಬಾರಿಗೆ ಆಯೋಜನೆಗೊಂಡ ಮಂಟಪರ ಏಕವ್ಯಕ್ತಿ ಯಕ್ಷಗಾನ ಸರಣಿ ಕಾರ್ಯಕ್ರಮದ ಉದ್ಘಾಟನೆಯ ದಿನದಂದು.

ಒಟ್ಟಿನಲ್ಲಿ ಮಂಗಳೂರು ವಲಯದ ಹೊಸ–ಹೊಸ ಗೆಳೆಯರ ಬಳಗ ಆದರದಿಂದ ಸ್ವಾಗತಿಸಿತ್ತು. ಹೊಸ ಓದುಗ ಮಿತ್ರರ ಮೆಚ್ಚುಗೆ ಸಂತಸವನ್ನು ಇಮ್ಮಡಿಸಿತ್ತು. ಈ ಹೊತ್ತಿಗೆ ಸರಿಯಾಗಿ ಮೂರರ ಪೋರಿ ಭ್ರಮರಿಯನ್ನು ಸಿದ್ಧಪಡಿಸಿ ವೇದಿಕೆಗೆ ಹತ್ತಿಸಿ ಸಹಕರಿಸಿದ ಬಳಗದ ಮಿತ್ರ ಸುನಿಲ್ ಕುಲಕರ್ಣಿ ಮತ್ತು ಅಕ್ಷರೋದ್ಯಮದ ಗೆಳೆಯರಿಗೆ ಧನ್ಯವಾದದ ಪುಟ್ಟ ಹೂಗುಚ್ಛ.

ಈ ಸಂಭ್ರಮಕ್ಕೆ ಮುನ್ನುಡಿ ಬರೆದವರು ಭರತನೃತ್ಯ ಸಭಾ ಮತ್ತು ಸನಾತನ ನಾಟ್ಯಾಲಯದ ಅಧ್ಯಕ್ಷರೂ ಆದ ಚಂದ್ರಶೇಖರ ಶೆಟ್ಟಿ ಮತ್ತು ಅವರ ಸನ್ಮಿತ್ರರು. ಕಳೆದ ಒಂದೂವರೆ ವರ್ಷಗಳಿಂದ ಮಂಗಳೂರಿನ ಭರತನೃತ್ಯ ಸಭಾ ಕಲಾಪ್ರೇಮಿಗಳಿಗೆ ಮಾತ್ರವಲ್ಲದೆ ಎಲೆಮರೆಯ ಪ್ರತಿಭಾವಂತ ಕಲಾವಿದರ ಅರಳುವಿಕೆಗೆ ಸಾಕಷ್ಟು ಚಟುವಟಿಕೆಗಳು, ಅವಕಾಶಗಳು, ಉತ್ಸವ, ಕಾರ್ಯಾಗಾರಗಳನ್ನು ನಡೆಸಿಕೊಡುತ್ತ ಬಂದಿರುವ ಸಮಾನ ಮನಸ್ಕರ ಸಂಸ್ಥೆ.



ಕಲಾಜಗತ್ತಿನ ದಿಗ್ಗಜರ, ಹಿರಿಯರ ಉಪಸ್ಥಿತಿಯಿದ್ದರೂ ಅಂದು ಸನಾತನ ನಾಟ್ಯಾಲಯದ ಚಾವಡಿಯಲ್ಲಿ ಜರುಗಿದ್ದು ಆಡಂಬರದ ಸದ್ದುಗದ್ದಲವಿಲ್ಲದ, ಹೊಗಳಿಕೆ–ತೆಗಳಿಕೆ–ಓಲೈಕೆ–ಸ್ವಂತಿಕೆ ಮೆರೆಸುವ ಭಾಷಣಗಳಿಲ್ಲದ ಕಲಾವಂತರನ್ನು ನೇರವಾಗಿ ತಟ್ಟುವ ಸಮಯಪ್ರಜ್ಞೆಯ ಚೊಕ್ಕ ಚಿಕ್ಕ ಕಾರ್ಯಕ್ರಮ. ಔಪಚಾರಿಕವಾಗಿದ್ದರೂ, ಪ್ರೀತಿ–ಗೌರವ, ಆದರದಿಂದಾಗಿ ಅನೌಪಚಾರಿಕ ನೆಲೆಯಲ್ಲಿ ಮೂಡಿಬಂದ ವೇದಿಕೆಗೆ ದೀಪಬೆಳಗಿ ಉದ್ಘಾಟನೆ ನೆರವೇರಿಸಿದವರು 'ಚಿಂತನೆಯಲ್ಲಿ ಹೊಸತನ ಕಂಡಾಗ ಪರಿಣಾಮಕಾರಿ ಬದಲಾವಣೆ ಸಾಧ್ಯ' ಎಂದು ಶುಭಪ್ರದವಾಗಿ ಮಾತನಾಡಿದ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಕುಂಬ್ಳೆ ಸುಂದರ ರಾವ್.

ಜೊತೆಗೆ ಹಿರಿಯ ಯಕ್ಷಗಾನ ವಿದ್ವಾಂಸ ಡಾ. ಎಂ. ಪ್ರಭಾಕರ ಜೋಶಿ ಅವರ ಅಧ್ಯಕ್ಷತೆ, ಮಂಟಪ ಪ್ರಭಾಕರ ಉಪಾಧ್ಯ, ಹಿರಿಯ ನೃತ್ಯ ಗುರು ಮುರಳೀಧರ ರಾವ್, ರಾಜ್ಯ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯ ನಾಗೇಶ್. ಎ. ಬಪ್ಪನಾಡು, ಸನಾತನ ನಾಟ್ಯಾಲಯುದ ವಿದುಷಿ ಶಾರದಾಮಣಿ ಶೇಖರ್, ನೃತ್ಯಾಭ್ಯಾಸಿಗಳು, ವಿಮರ್ಶಕರು, ಕಲಾವಿದರು.., ಹೀಗೆ ಹಮ್ಮು ಬಿಮ್ಮು ಇಲ್ಲದ ಸಹೃದಯ ಮನಸ್ಥಿತಿ.



ಅಧ್ಯಕ್ಷತೆಯ ನೆಲೆಯಲ್ಲಿ ಮಾತನಾಡಿದ ಡಾ. ಎಂ. ಪ್ರಭಾಕರ ಜೋಶಿ ಅವರ ಮಾತುಗಳು ಸಮಕಾಲೀನ ಸಂದರ್ಭವನ್ನು ಇಣುಕಿ ನೋಡಿ, ಚಿಂತನೆಗೆ ಪೂರಕವಾಗಿ ಧ್ವನಿಸಿತ್ತು.. ಇದೋ, ಅವರ ಮಾತುಗಳಲ್ಲಿ ಬೊಗಸೆಗೆ ಸಿಕ್ಕಿದ ಒಂದಷ್ಟು ನುಡಿಗಳಿಗೆ ಕಿವಿಯಾಗೋಣ..

'ಒಬ್ಬ ನರ್ತಕನಿಗೆ ಲಯ ಮುಖ್ಯವಾದದ್ದು. ಅದರ ಆಧಾರದಲ್ಲಿ ಅವನ ನೈಪುಣ್ಯತೆ ನಿಗದಿಯಾಗುತ್ತದೆ. ಇಂತಹ ನೃತ್ಯಾಧಾರಿತ ವಿಷಯಗಳನ್ನು ಅವಲೋಕನ ಮತ್ತು ಅಭಿವೃದ್ಧಿಪಡಿಸುವಲ್ಲಿ ನೂಪುರ ಭ್ರಮರಿಯ ಕೆಲಸ ಸಮಾಜಕ್ಕೆ ಅವಶ್ಯಕ.

ಪರಂಪರೆ, ಸುಧಾರಣೆ, ಹೊಸತನ ಅತ್ಯಂತ ಭಯಾನಕ ಶಬ್ದಗಳು. ನಮಗೆ ತಿಳಿಯದೇ ಮಾಡಿದ್ದನ್ನೇ ಮಾಡಿದರೆ ಅದು ಪರಂಪರೆಯೆನ್ನುತ್ತೇವೆ. ಸಂಪ್ರದಾಯವೆಂಬುದು ಕಲೆಯಲ್ಲಿ ನುಸುಳಿದೆ. ಆದರೆ ಇಂತಹ ಶಬ್ದಗಳ ಗಂಭೀರ ಅರ್ಥವನ್ನು ತಿಳಿದುಕೊಂಡು, ಕಲೆಯಲ್ಲಿ ಏನಾಗಿದೆ ಎಂದು ನೋಡುವ ಕೆಲಸ ಅಗಬೇಕು.. ಇಂತಹ ಅವಲೋಕನ ನೂಪುರ ಭ್ರಮರಿ ಮುನ್ನಡೆಸಿಕೊಂಡು ಬರುತ್ತಿದೆ..

ಕಲೆಯ ಚರಿತ್ರೆಯನ್ನು ತಿಳಿದರೆ ಕಾಲಕಾಲಕ್ಕೂ ಕಲೆಯೊಂದು ಕವಲೊಡೆಯುವುದನ್ನು ಕಾಣುತ್ತೇವೆ. ಕಲೆಗಳೆಲ್ಲ ಒಂದೇ ಮೂಲದಿಂದ ಬಂದವಾಗಿದ್ದರೂ, ಬೇರೆ ಬೇರೆ ದಿಕ್ಕನ್ನು ಹಿಡಿದು ಹೊರಟ ಕಾರಣ ಅಂತಹ ವ್ಯತ್ಯಾಸಗಳನ್ನು ಅರಿತುಕೊಳ್ಳಬೇಕು. ಇಲ್ಲವಾದರೆ ಮುಂದೊಂದು ದಿನ ಕಲೆಯೊಂದನ್ನು ಕಲಿಯಬೇಕು ಅಥವಾ ನೋಡಬೇಕೆಂದರೆ ಅದು ಅಂಚೆ ತೆರಪಿನ ಶಿಕ್ಷಣದಲ್ಲಿ ಕಳಿಸುವ ಪುಸ್ತಕವಾಗುವ ಅಪಾಯವಿದೆ.

ನಮ್ಮ ಅನುಭವಕ್ಕೆ ಬಾರದ ವಿಷಯಗಳನ್ನು ಕಲಿಯುವಾಗ ಹೆಚ್ಚು ಆಲೋಚಿಸಿ ಕಲಿಯಬೇಕಾದ ಆವಶ್ಯಕತೆಯಿದೆ. ಯಾವುದೇ ಪ್ರಸಂಗವನ್ನು ನಿರ್ವಹಿಸುವಾಗ ಕಲಾವಿದನಿಗೆ ಹೊಸ ಕಲ್ಪನೆಗಳಿರಬೇಕು. ಆ ಕಲ್ಪನೆಯಲ್ಲಿ ಔಚಿತ್ಯ-ಪ್ರಾಯ-ವಯಸ್ಸು-ಲಿಂಗ-ಅನುಭವ ಎಲ್ಲವನ್ನೂ ಹೊಂದಿಸಿಕೊಂಡಂತೆ ಆ ಪಾತ್ರದ ಮಟ್ಟವನ್ನು ತಿಳಿಯಬೇಕು. ಆದರೆ ಅನೇಕ ಸಂದರ್ಭಗಳಲ್ಲಿ ಮುದ್ರೆಗಳನ್ನು ಯಥಾವತ್ತಾಗಿ ಮಾಡುವಾಗಲೂ ಎಷ್ಟೋ ಜನರು ಯೋಚಿಸುವುದೇ ಇಲ್ಲ.





ಪಾತ್ರ ಯಾವುದು; ಅನುಭವ ಏನು ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ ನಟಿಸುವುದು ಮುಖ್ಯ. ಜನರು ಮೆಚ್ಚುತ್ತಾರೆ ಎಂದು ಕ್ರಿಯೆ-ಪ್ರತಿಕ್ರಿಯೆಗಳನ್ನು ತಪ್ಪಾಗಿ ಮಾಡಕೂಡದು. ಆದರೆ ಇಂದು ದೊಡ್ಡ-ದೊಡ್ಡ ಕಲಾವಿದರೆನಿಸಿಕೊಂಡವರಲ್ಲೇ ಇದರ ಕೊರತೆ ಕಾಣುತ್ತಿದೆ.

ಇಂದು ಕಲೆಯ ಮೇಲಿನ ಬೆಲೆ ಕಡಿಮೆಯಾಗುತ್ತಿದೆ. ಮಾಧ್ಯಮಗಳಲ್ಲಿ ನೃತ್ಯದ ಕಾರ್ಯಕ್ರಮವೂ ನೋಡಲು ಸಿಗುತ್ತಿದೆ. ಇಂದು ಕಲೆಯನ್ನು ಪೂರ್ಣವಾಗಿ ಅರ್ಥೈಸಿಕೊಳ್ಳದೇ ಹಾಡುವುದು, ನರ್ತಿಸುವುದು, ಪ್ರೋತ್ಸಾಹ-ಬಹುಮಾನ-ಬಿರುದುಗಳನ್ನು ನೀಡುವುದು ಜಾಸ್ತಿಯಾಗುತ್ತಿದೆ. ರಂಗಭೂಮಿ ಬತ್ತಿ ಹೋಗುತ್ತಿದೆಯೇನೋ ಎಂಬಂತೆ ಇತ್ತೀಚೆಗಿನ ದಿನಗಳಲ್ಲಿ ಭಾಸವಾಗುತ್ತಿದೆ. ಸಾಧಿಸುವ ಮೊದಲ ಮೆಟ್ಟಿಲಿನಲ್ಲಿರುವವರನ್ನು ಹಿರಿಯ ಸಾಧಕರೊಂದಿಗೆ ಹೋಲಿಸುವಾಗ ಅರ್ಹತೆ, ಸಾಧನೆಗಳಿಗಿಂತಲೂ ಹೊಗಳಿಸಿಕೊಳ್ಳುವುದೇ ಜಾಸ್ತಿಯಾಗುತ್ತಿದೆ. ಇಲ್ಲವಾದರೆ ಟಿವಿಯಲ್ಲಿ ಬಾಯಿಪಾಠ ಕಲಿತು ಹಾಡುವ ಮಗುವನ್ನು ಲತಾ ಮಂಗೇಶ್ಕರ್ ತರಹ ಹಾಡುತ್ತೀ ಎಂದರೆ ಕಲೆಗೂ, ಕಲಾವಿದನಿಗೂ ಮಾಡುವ ಅಪಹಾಸ್ಯ ಮತ್ತು ಅವಿವೇಕವಲ್ಲದೆ ಮತ್ತೇನು?

ಇಂತಹ ಸಂದರ್ಭದಲ್ಲಿ ನಾವು ತುಂಬಾ ಗಟ್ಟಿಯಾಗಿ ನಿಲ್ಲಬೇಕಾದ ಅವಶ್ಯಕತೆಯಿದೆ. ಕಲೆಗಳ ಕೀಳು ಮಾರುಕಟ್ಟೆಯ ಕಾಲದಲ್ಲಿ ತಪಸ್ಸಿನಂತೆ ಛಲ ಹೊತ್ತು ಸಣ್ಣ-ಸಣ್ಣ ರೂಪದಿಂದ, ಪಿಸುಧ್ವನಿಯಿಂದ ಹಿಡಿದು ಸ್ಥಿರವಾಗಿ, ಅರ್ಥಪೂರ್ಣವಾದ ಕೆಲಸ ಮಾಡುವ ಅನಿವಾರ್ಯತೆಯಿದೆ. ಈಗಾಗಲೇ ಯಕ್ಷಗಾನವನ್ನೂ ಒಳಗೊಂಡಂತೆ ವಿವಿಧ ನೃತ್ಯ ಪ್ರಕಾರಗಳಲ್ಲಿ ಹುದುಗಿಕೊಂಡಿರುವ ಸಾಹಿತ್ಯವನ್ನು ಬಳಸಿಕೊಂಡು ಕಲೆಗಳು ಬೆಳೆಯಬೇಕಾಗಿದೆ. ಜೊತೆಗೆ ಈ ಸಾಹಿತ್ಯಗಳು ಯಾವ್ಯಾವ ಭಾವಗಳನ್ನು ಕೊಡುತ್ತವೆ ಎಂಬುದನ್ನು ಮಕ್ಕಳೂ ಸೇರಿದಂತೆ ಹಿರಿಯರು ವಿಶೇಷವಾಗಿ ಗಮನಿಸಬೇಕು.'

ತದನಂತರ ಸತತ ಮೂರು ದಿನಗಳ ಪರ್ಯಂತವೂ ಭಾವ-ರಸ ಸರಣಿ. ಮಂಟಪರ ಅಭಿನಯ, ರಸಪ್ರತಿಪಾದನೆ ಮತ್ತಷ್ಟು ಮನೆಮಂದಿ ಸನಾತನ ನಾಟ್ಯಾಲಯದ ಚಾವಡಿಗೆ ಬಂದು ಕುಳಿತುಕೊಳ್ಳುವಂತೆ ಮಾಡಿತ್ತು. ಜೊತೆಗೆ ಎರಡು ದಿನಗಳ ಸಂವಾದ ಸರಣಿ ಸಹೃದಯರನ್ನು ಕಲೆಗೆ ಇನ್ನಷ್ಟು ಸಮೀಪಕ್ಕೆ ತಂದಿತ್ತು. ಧನ್ಯತೆಯ ಕ್ಷಣಗಳವು.

ಆದರೆ ಕಾರ್ಯಕ್ರಮ ಮುಗಿಸಿ ಮನೆಗೆ ಮರಳುವ ಹೊತ್ತಿಗೆ ಫೋನ್ ಕಾಲ್, ಇ-ಮೇಲ್ ಗಳಲ್ಲಿ ಆತ್ಮೀಯ ಸ್ನೇಹಿತರ ಪ್ರೀತಿ ತುಂಬಿದ ಆಕ್ರೋಶ, ನಲುಮೆಯ ಹಾರೈಕೆ.. 'ನಮಗ್ಯಾಕೆ ಹೇಳಲಿಲ್ಲ ! ಮೊದಲೇ ಹೇಳೋಕೆ ಏನಾಗಿತ್ತು? ಬರೋದಿಲ್ಲಾ ಅಂತಿದ್ವಾ?'

ಕಣ್ಣಿಂದ ಇಣುಕಿದ್ದವು ಹನಿಗಳು !!!

– ಮನೋರಮಾ. ಬಿ. ಎನ್

*ಸಂಚಿಕೆಗಾಗಿ ಸಹಕರಿಸಿದವರು*

**ರಾಧಾಕೃಷ್ಣ ನೃತ್ಯ ನಿಕೇತನ**

ಭರತನಾಟ್ಯ ಹಾಗೂ ಕೂಚಿಪುಡಿ ನೃತ್ಯ ಶಿಕ್ಷಣ ಸಂಸ್ಥೆ.

**ವೀಣಾ ಎಂ. ಸಾಮಗ**
ನಿರ್ದೇಶಕರು, 'ಕಲಾರ್ಪಣ',ವಾದಿರಾಜ ರಸ್ತೆ, ಉಡುಪಿ.

ಸ್ಥಾಪಕರು :
**ನೃತ್ಯ ಕಲಾಸಿಂಧು ರಾಧಾಕೃಷ್ಣ ತಂತ್ರಿ**



# ಒಳನೋಟ



**ಮಾರ್ಚ್ 3 :** ಸನಾತನ ನಾಟ್ಯಾಲಯದಲ್ಲಿ ಮಂಟಪ ಪ್ರಭಾಕರ ಉಪಾಧ್ಯಾಯರ ಏಕವ್ಯಕ್ತಿ ಯಕ್ಷಗಾನ 'ಜಾನಕೀ ಜೀವನ' ಪ್ರದರ್ಶನ ;

ಜೂನ್–ಜುಲೈ 2009 ತಿಂಗಳಿನಲ್ಲಿ ಮಂಗಳೂರಿನ ಕಲಾಸಕ್ತರ ಮನೆಗಳಲ್ಲಿ ನಡುಮನೆ ಏಕವ್ಯಕ್ತಿ ಯಕ್ಷಗಾನ ಸರಣಿ ಕಾರ್ಯಕ್ರಮ ನಡೆಯಲಿದೆ. ಅಪೇಕ್ಷಿತರು ಸನಾತನ ನಾಟ್ಯಾಲಯದ ಅಧ್ಯಕ್ಷ ಚಂದ್ರಶೇಖರ ಶೆಟ್ಟಿಯವರನ್ನು ಸಂಪರ್ಕಿಸಬಹುದು.

**ಮಾರ್ಚ್ 1ರಿಂದ 11 :** ಕೇರಳ ರಾಜ್ಯದ ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ರಾಷ್ಟ್ರೀಯ ನಾಟಕ–ರಂಗೋತ್ಸವ ತಿರುವನಂತಪುರದಲ್ಲಿ.

**ಮಾರ್ಚ್ 3 :** ವಿಶ್ವಪ್ರಸಿದ್ಧ ಖಜುರಾಹೋ ಉತ್ಸವದಲ್ಲಿ ವೈಜಯಂತಿ ಕಾಶಿ ಅವರ ಕೂಚಿಪುಡಿ ನೃತ್ಯ ಪ್ರದರ್ಶನ.

**ಮಾರ್ಚ್ 8 :** ಮೈಸೂರಿನ ಭೂಷಣ್ ಅಕಾಡೆಮಿ ಆಫ್ ಪರ್ ಫಾರ್ಮಿಂಗ್ ಆರ್ಟ್ಸ್‌ನ ಗುರು ವಿದುಷಿ ಅಂಜನಾ ಭೂಷಣ್ 2009 ರ ಸಾಲಿನ ವಿಶಿಷ್ಟ ವನಿತಾ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ಭರತನಾಟ್ಯ ಮತ್ತು ವಿಶಿಷ್ಟಚೇತನ ಮಕ್ಕಳ ವಾಚಿಕ ದೋಷಗಳು ಮತ್ತು ವ್ಯಕ್ತಿತ್ವ ನಿರ್ಮಾಣದ ಕುರಿತಾಗಿ ಕೆಲಸ ಮಾಡುತ್ತಿರುವ ಅಂಜನಾ ಅವರಿಗೆ ವಿಶ್ವ ಮಹಿಳಾ ದಿನಾಚರಣೆಯ ಸಂದರ್ಭ ವಿಶಾಖಪಟ್ಟಣದ ನಟರಾಜ ಮ್ಯೂಸಿಕ್ ಅಂಡ್ ಡ್ಯಾನ್ಸ್ ಅಕಾಡೆಮಿ ಯುವಕಲಾ ಭಾರತೀ ಆಡಿಟೋರಿಯಂನಲ್ಲಿ ಪ್ರಶಸ್ತಿ ವಿತರಿಸಲಾಯಿತು.

**ಮಾರ್ಚ್ 13 ಮತ್ತು 14 :** ಡಾ. ಪದ್ಮಾ ಸುಬ್ರಹ್ಮಣ್ಯಂ ಅವರ ನೇತೃತ್ವದ ಭರತಮುನಿ ಫೌಂಡೇಶನ್ ಫಾರ್ ಏಶ್ಯನ್ ಕಲ್ಚರ್ ಸಂಸ್ಥೆಯ ವತಿಯಿಂದ ದೆಹಲಿ ವಿಶ್ವವಿದ್ಯಾನಿಲಯದ ಸಹ ಪ್ರವಾಚಕ , ಇಂಡಿಯಾಸ್ ಫೋರಂ ಫಾರ್ ಹೆರಿಟೇಜ್ ಸ್ಥಾಪಕ ಸದಸ್ಯ, ಟ್ರಸ್ಟಿ ಭರತ್ ಗುಪ್ತಾ ಅವರಿಂದ ಉಪನ್ಯಾಸ ; ಮಾರ್ಚ್ 20 ರಂದು ಕಾಂಚಿಪುರದ ಶ್ರೀ ಚಂದ್ರಶೇಖರ ಸರಸ್ವತಿ ವಿಶ್ವ ಮಹಾವಿದ್ಯಾಲಯದ ನಿವೃತ್ತ ಕುಲಪತಿ ಡಾ. ಆರ್. ನಾಗಸ್ವಾಮಿ ಅವರಿಂದ ಉಪನ್ಯಾಸ ಮತ್ತು – ಚೆನ್ನೈಯ ಗಾಂಧಿನಗರದ ಸುಬ್ರಹ್ಮಣ್ಯ ಹಾಲ್‌ನಲ್ಲಿ.

**ಮಾರ್ಚ್ 22 :** ಪ್ರತೀ ಭಾನುವಾರ ಬೆಳಿಗ್ಗೆ 8 ಗಂಟೆಗೆ ಜಯಾ ಟಿವಿ ಪ್ರಾಯೋಜಿಸುವ ಶಾಸ್ತ್ರೀಯ ನೃತ್ಯ ಕಾರ್ಯಕ್ರಮ 'ತಕಧಿಮಿತಾ' ದಲ್ಲಿ ಪದ್ಮಜಾ ಸುರೇಶ್ ಅವರ ನೃತ್ಯ ಪ್ರದರ್ಶನ ಮತ್ತು ಅತಿಥಿ ತೀರ್ಪುಗಾರರಾಗಿ ಭಾಗವಹಿಸುವಿಕೆ.

**ಮಾರ್ಚ್ 29 :** ಭರತನೃತ್ಯ ಸಭಾ ಆಯೋಜಿಸುವ ತಿಂಗಳ ನೃತ್ಯ ಕಾರ್ಯಕ್ರಮ ಮಂಗಳೂರಿನ ಪುರಭವನದಲ್ಲಿ. ಅರ್ಥಾ ಪೇರ್ಲಾ ಅವರಿಂದ ಭರತನಾಟ್ಯ

**ಏಪ್ರಿಲ್ 2009 :** ಭೂಷಣ್ ಅಕಾಡೆಮಿಯು ಜಗನ್ಮೋಹನ ಅರಮನೆಯಲ್ಲಿ ರಾಜ್ಯಮಟ್ಟದ ಮೂರುದಿನಗಳ





ಕಾಲ ಯುಗಳ ಮತ್ತು ಪುರುಷರಿಗಾಗಿ ಶಾಸ್ತ್ರೀಯ ನೃತ್ಯ ಉತ್ಸವ 'ಪುರುಷ ಭೂಷಣ' ವನ್ನು ಏರ್ಪಡಿಸಿದ್ದು, 5–15 ವಯೋಮಾನದ ಪ್ರತಿಭಾವಂತ ಬಾಲಕರಿಗೆ ಮತ್ತು 15–35 ವಯೋಮಾನದ ಯುವಕರಿಗೆ ಸ್ಪರ್ಧೆಯನ್ನೂ ಆಯೋಜಿಸಿದೆ. ಸಮೂಹ, ಯುಗಳ ಪ್ರದರ್ಶನಕ್ಕೂ ಅವಕಾಶವಿದೆ.

**ಏಪ್ರಿಲ್ 25 :** ಭರತನೃತ್ಯ ಸಭಾ ಆಯೋಜಿಸುವ ತಿಂಗಳ ನೃತ್ಯ ಕಾರ್ಯಕ್ರಮ ಮಂಗಳೂರಿನ ಪುರಭವನದಲ್ಲಿ. ಮೂಕಾಂಬಿಕಾ ನೃತ್ಯ ಶಾಲೆಯ ಗುರು ದೀಪಕ್ ಕುಮಾರ್ ಅವರಿಂದ ಭರತನಾಟ್ಯ. ಮೇ 3 ರಂದು ಚೆನ್ನೈಯ ವಿಜಯಶ್ರೀ ವಿಠ್ಠಲ್ ಅವರಿಂದ ಭರತನಾಟ್ಯ.

**ಏಪ್ರಿಲ್ 10 ಮತ್ತು 29 :** ಪದ್ಮಜಾ ಸುರೇಶ್ ಅವರ ಕಲ್ಪತರು ಕಲಾವಿಹಾರ ಸಂಸ್ಥೆಯ ವಿದ್ಯಾರ್ಥಿಗಳಿಂದ ಬೆಂಗಳೂರಿನ ಇಸ್ಕಾನ್ ಬ್ರಹ್ಮೋತ್ಸವದಲ್ಲಿ ಮತ್ತು ನಯನಾ ಹಾಲ್‌ನಲ್ಲಿ ನೃತ್ಯ ದಿನಾಚರಣೆಯ ಸಂದರ್ಭ 'ಶ್ರೀ ಮಾಧವೇಂದ್ರಪುರಿ' ನೃತ್ಯ ಪ್ರದರ್ಶನ.

**ಏಪ್ರಿಲ್ 30 ಮತ್ತು 1 ಮೇ :** ವಿಶ್ವ ನೃತ್ಯ ದಿನಾಚರಣೆಯ ಪ್ರಯುಕ್ತ ಬೆಂಗಳೂರಿನ ಸೃಷ್ಠಿ ನೃತ್ಯ ಸಂಸ್ಥೆಯ ವತಿಯಿಂದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಶಾಸ್ತ್ರೀಯ, ಸಮಕಾಲೀನ, ಫ್ಯೂಷನ್, ಜಾನಪದ, ಶಾಸ್ತ್ರೀಯ ನೃತ್ಯಾಧಾರಿತ ಸಿನಿಮಾ ನೃತ್ಯಗಳ ಪ್ರದರ್ಶನ ಸಮ್ಮೇಳನ. ಸಂಶೋಧನಾ ವಿದ್ಯಾರ್ಥಿಗಳ ಸಹಿತ ನೃತ್ಯಾಸಕ್ತ ವಿದ್ಯಾರ್ಥಿಗಳು ಈ ಸಮ್ಮೇಳನದಲ್ಲಿ ಹೆಸರು ನೋಂದಾಯಿಸಿ ಪ್ರದರ್ಶನ ನೀಡುವುದರೊಂದಿಗೆ ಸಂಶೋಧನಾ ಪ್ರಬಂಧಗಳನ್ನು ಸಲ್ಲಿಸಬಹುದು. ಕಾರ್ಯಾಗಾರ ನಡೆಸಲೂ ಅವಕಾಶವಿದೆ. ಏಕವ್ಯಕ್ತಿ ನೃತ್ಯಪ್ರದರ್ಶನಗಳಿಗೆ 10 ನಿಮಿಷ ಮತ್ತು ಸಮೂಹ ನೃತ್ಯಕ್ಕೆ 20 ನಿಮಿಷ ಕಾಲಾವಕಾಶ ನೀಡಲಾಗುವುದು. ಸಮ್ಮೇಳನದಲ್ಲಿ ಭಾಗವಹಿಸಲು ಅಭ್ಯರ್ಥಿಗಳು 1000 ರೂಗಳಂತೆ ಫೀಸನ್ನು ಪಾವತಿ ಮಾಡಬೇಕಾಗುವುದು. ಆಸಕ್ತರು ಮೊಬೈಲ್ ನಂಬರ್ 09845698089 ಸಂಪರ್ಕಿಸಬಹುದು.

* ಇಂಡಿಯಾ ವರ್ಲ್ಡ್ ಕಲ್ಚರಲ್ ಫೋರಂನ ಸದಸ್ಯರಾಗಿ ಜಾರ್ಖಂಡ್‌ನ ಛಾವೋ ನೃತ್ಯದ ಗುರು ಪಂಡಿತ್ ಗೋಪಾಲ್ ಪ್ರಸಾದ್ ದುಬೆ, ಮುಂಬೈಯ ಕಥಕ್ ಕಲಾವಿದೆ ಅಲಕನಂದಾ ಆಯ್ಕೆಯಾಗಿದ್ದಾರೆ.

ಲಲಿತ ಲಹರಿ

ಪತ್ರಿಕೆಯ ನಡೆಸುವುದು ಸದರವಲ್ಲ
ಓದುಗರು ಸಿಗುವವರು ಕಾಸು ಕೊಟ್ಟಲ್ಲ
ನೃತ್ಯದ ರುಚಿ ಹತ್ತಿದರೆ ನಿನಗೆ
ಸತ್ಯದ ಶುಚಿ ನಿನ್ನ ಮನಸಿಗೆ

**– ಕುಂಬ್ಳೆ ಸುಂದರ ರಾವ್**




*ಸಂಚಿಕೆಗಾಗಿ ಸಹಕರಿಸಿದವರು*

## ವಿದುಷಿ ಪಾವನಾ ರಾಜೇಂದ್ರ

ನಿರ್ದೇಶಕರು, ಶಾರದಾ ನೃತ್ಯಾಲಯ, ಉಡುಪಿ.



# ಚಂದ್ರಕಲಾ ಹಸ್ತ



## ಹಸ್ತ ಮಯೂರಿ

**ಲಕ್ಷಣ:** ತೋರು ಬೆರಳು, ಮತ್ತು ಹೆಬ್ಬೆರಳನ್ನು ಉದ್ದಕ್ಕೆ ಬಲ ಭಾಗಕ್ಕೆ ಹಿಡಿದು, ಉಳಿದ ಬೆರಳುಗಳನ್ನು ಅಂಗೈಗೆ ಮುಖ ಮಾಡುವುದು ಅಥವಾ ಸೂಚಿಯ ಹೆಬ್ಬೆರಳನ್ನು ಬೇರ್ಪಡಿಸುವುದು. ಚಂದ್ರಕಲಾ ಎಂದರೆ ಚಂದ್ರನ ಕಲೆ ಎಂದು ಹೆಸರು. ಈ ಹಸ್ತಕ್ಕೆ ಬಾಲಚಂದ್ರ ಎಂಬ ಹೆಸ್ನೊಂದು ಹೆಸರೂ ಇದೆ.

ಈ ಹಸ್ತದ ವಿನಿಯೋಗ ಅಭಿನಯ ದರ್ಪಣವನ್ನು ಹೊರತುಪಡಿಸಿದರೆ, ನಾಟ್ಯಶಾಸ್ತ್ರ ಮತ್ತು ಇನ್ನುಳಿದ ಗ್ರಂಥಗಳಲ್ಲಿ ಅಷ್ಟಾಗಿ ಕಂಡು ಬಂದಿಲ್ಲ. ಯೋಗಶಾಸ್ತ್ರದಲ್ಲಿ ರೋಗನಿವಾರಕ ಮುದ್ರೆಗಳ ಪೈಕಿ ಕಂಡುಬರುವ ಕುಂಟ ಮುದ್ರೆಯು ಚಂದ್ರಕಲಾ ಹಸ್ತವೇ ಆಗಿದ್ದು, ದೇಹದ ಎಲ್ಲಾವಿಧದ ತೊಂದರೆಗಳ ನಿವಾರಣೆಗೆ ಉಪಯುಕ್ತ ಎನ್ನಲಾಗಿದೆ. ದಿನನಿತ್ಯ ಜೀವನದಲ್ಲಿ ಅಳತೆಗೆ, ಯೋಚನೆ ಮಾಡುವಲ್ಲಿ (ಕೆನ್ನೆಯ ಬಳಿ ಇಟ್ಟುಕೊಂಡು)ಈ ಹಸ್ತವು ಬಳಕೆಯಾಗುತ್ತದೆ.

**ವಿನಿಯೋಗ:** ಚಂದ್ರ, ಮುಖ, ಒಂದು ಗೇಣು ಎಂದು ಅಳೆಯುವುದು, ಚಂದ್ರನ ಆಕಾರದ ವಸ್ತುವನ್ನು ಸೂಚಿಸುವುದು, ಶಿವನ ಕಿರೀಟದಲ್ಲಿರುವುದು, ಗಂಗಾನದಿ, ಹರಿತ ಮಾಡುವುದು.

ಇತರೆ ವಿನಿಯೋಗ: ಚೋಟಿನ ಅಳತೆ, ಗಾಂಢೀವ ಧನಸ್ಸು, ಆನೆಯ ದಂತ, ಶ್ಲಾಘನೆ ಅಥವಾ ಸ್ತೋತ್ರಾರ್ಹ ಎಂಬರ್ಥ, ನೇಗಿಲು, ಬಾಣಗಳ ಗುರಿಹಿಡಿಯುವಿಕೆ, ದುಂಡಾಗಿ ಸುತ್ತುವುದು, ಕಾಲಪ್ರಮಾಣ, ಬೀಸಣಿಗೆ, ಮೂಗಿನ ಮೇಲೆ ಬೆರಳಿಟ್ಟಾಗ ಆಶ್ಚರ್ಯ, ಗಲ್ಲದ ಮೇಲೆ ಇಟ್ಟಾಗ ಹಾಸ್ಯ, 'ನೀನು ಸಮರ್ಥ' ಎಂಬ ಕುಹಕದ ಮಾತು. ಬಾಲಕರು ವಿನೋದಕ್ಕಾಗಿ ಕೊಂಬನ್ನು ಊದುವುದು– ಈ ಮುಂತಾದ ವಿಷಯುಗಳನ್ನು ಸೂಚಿಸಬಹುದು.

ಚಂದ್ರಕಲಾ ಹಸ್ತದಲ್ಲಿನ ಕಿರು, ಉಂಗುರ ಮತ್ತು ಮಧ್ಯಮ–ಈ ಮೂರು ಬೆರಳುಗಳನ್ನು ಸ್ವಲ್ಪ ಮೇಲೆತ್ತಿ ಬಾಗಿಸಿ ಹಿಡಿಯುವುದರಿಂದ ಪ್ರಾಲಂಭ ಎಂಬ ಇನ್ನೊಂದು ಮಾದರಿಯ ಅಸಂಯುತ ಹಸ್ತವೇರ್ಪಡುತ್ತದೆ. ಪ್ರಾಲಂಭ ಎಂದರೆ ನೇತಾಡುವುದು ಎಂದರ್ಥ.

ಈ ಹಸ್ತದ ವಿನಿಯೋಗಗಳು ಈ ಬಗೆಯಲ್ಲಿವೆ : ದ್ವಾರಪಾಲಕ ಹಸ್ತ, ಆಲೋಚನೆ, ಆಶ್ಚರ್ಯ, ಕೋಪವೇಕೆ ಎಂದು ಪ್ರೀತಿಯಿಂದ ಕೇಳು, ಏಕೆ, ಹೇಗೆ, ಯಾರು, ಮುಂತಾದ ಪ್ರಶ್ನೆ ಕೇಳಲು ನೃತ್ಯ ಮತ್ತು ನಿತ್ಯ ಜೀವನದಲ್ಲೂ ಬಳಕೆಯಾಗುತ್ತದೆ. ವಿಟನನ್ನು ಧಿಕ್ಕರಿಸುವುದು, ಮಾರ್ಗವನ್ನು ಬಿಟ್ಟುಕೊಡುವುದು, ಜಗಳವಾಡುವಾಗ ಹೆಂಗಸರು ಕೈ ನೀಡುವುದು, ಅನ್ಯೋನ್ಯಾಲಿಂಗನ, 'ನನ್ನ ಕೈಯಲ್ಲೇನೂ ಇಲ್ಲ' ಎಂದು ಸೂಚಿಸುವುದು, ಮೋಕ್ಷ ಮತ್ತು ಮಹಿಮೆಯ ಸೂಚನೆ ಇನ್ನಿತರ ವಿನಿಯೋಗಗಳು.





# ಲಲಿತ ಲಹರಿ



**ನಾ**ಟ್ಯದ ಅಧಿದೇವನಾದ ನಟರಾಜ ವಿವಿಧ ಕಾಲಘಟ್ಟಗಳಲ್ಲಿ ಏಳು ತಾಂಡವಗಳನ್ನು ಮಾಡಿದನೆಂಬ ಪ್ರತೀತಿಯಿದೆ. ಅದರಲ್ಲಿ ಕೊನೆಯದೇ ಪ್ರಳಯ ತಾಂಡವ ಅಥವಾ ಸಂಹಾರ ತಾಂಡವ. ಸರ್ವಸಂಹಾರ ಕಾಲದಲ್ಲಿ ಬ್ರಹ್ಮಾಂಡಕಾಂಡ ವಿಸ್ಫೋಟದ ಸಂದರ್ಭದಲ್ಲಿ ಆಡಿದ ತಾಂಡವವೇ ಇದು. ಈ ಪ್ರಳಯ ತಾಂಡವದ ಲೀಲಾ ಪ್ರಸಂಗವನ್ನು ತಮ್ಮ ಕಲ್ಪನೆಯಲ್ಲಿ ಹಿರಿಯ ಕವಿ ವಿ.ಸೀತಾರಾಮಯ್ಯ ಅವರು ಕಂಡುಕೊಂಡದ್ದು ಹೀಗೆ.. ಅವರ 'ಗೀತಗಳು' ಕವನ ಸಂಕಲನದಿಂದ ಅರಿಸಲಾದ ಪ್ರಳಯ ತಾಂಡವ ಇದೋ ನಿಮ್ಮ ಲಲಿತ ಲಹರಿಯಲ್ಲಿ.

ಭೈರವ ಲೀಲಾ ಪ್ರಸಂಗವಿದು !
ಪ್ರಳಯದಬ್ಬರದೊಳಪ್ಪಳಿಪ ಭಂಗ ತರಂಗ !
ಝುಣಝುಣರೆಂದು ಕುಣಿವ ಕಾಲ್ ಕಿಂ
ಕಿಣಿಗಳ ಘನ ನಿನದ ! ಇಳಿದುಯ್ಯಲಾಡುವ
ಫಣಿ ಗಡಣಗಳ ಸೀಳುಸಿರಾವರಣ !

ಆಣುಬಿಡದೆಲ್ಲ ಲೋಕಗಳಂತ್ಯದಂತಕನ ನರ್ತನದಂದ !
ಂ ನಿಮಿರೊಳು ಹುಟ್ಟಿ ಚಂದದೊಳಿದ್ದ !
ೀವಿಗಳ ಭಂಗದ ಬರಿಯಂತರಂಗ !
ಯ ಹೊಂದನೀಕ್ಷಿಸುತಲಿ ತಾ !
ಡುವಿನೊಳಡಿಯಿಟ್ಟು ಆಡುವ ತಾಂಡವದಾನಂದ !

ಂ ಸೂರ್ಯ ತಾರೆಗಳಿಲ್ಲ !
ಭೂಮಿಗಳೆ ತಾವ್ ಮೊದಲಿಲ್ಲ !
ಹಗರಣ ಸಂತಸಗಳ ಸುಳಿವಿಲ್ಲ !
ಬಗೆ ಭಾವಗಳ ಮೇರೆಯ ಮೀರಿ ತೋರುವೀ ಉನ್ಮಾದದಾನಂದ !
ಕೊನೆಮೊದಲಿಲ್ಲವು ತಮತೆಂದು ಮೆರೆದಿರ್ದ
ಅನಿಮಿಷರ್ಗುಳಿವಾಶ್ರಯಗಳಿಲ್ಲ !

ಅನವರತವು ಹರಿವವಸರ ರೋರುವ ಕಲಿಕಾಲನಿಗೂ ಬದುಕಿಲ್ಲ !
ಅನಲ ಮಾರುತರಳಿವಿನೊಳು ಒಡ್ಡಿದ ಭಾವದೊಳಾಳುವ ಆನಂದ !
ವಿಶ್ವವ ಹೊರೆಯುವ ಚಿಂತೆಯ ತೊರೆದು,
ಸುಸ್ಮಿತ ವದನದೊಳೆಲ್ಲವನಗಿದು,
ಸುಸ್ವರ ಲಯ ತಾನಗಳನುವಿಡಿದು
ಭಸ್ಮ ಲೇಪದ ಮೈಸಿರಿಯನು ಬೆಳಗುವ ಅಚ್ಚರಿಯಾನಂದ !

## ದೀವಟಿಗೆ 1 ನಟನ ಮತ್ತು ರಂಗಮನೆ

**ಚ**ಲನಚಿತ್ರ ನಟ, ರಂಗಕರ್ಮಿ ಮಂಡ್ಯ ರಮೇಶ್ ಅವರ ಸಾರಥ್ಯದಲ್ಲಿ ಮುನ್ನಡೆಯುತ್ತಿರುವ ಮೈಸೂರಿನ 'ನಟನ' ಸಂಸ್ಥೆ ರಂಗಭೂಮಿಗೆ ಸಂಬಂಧಪಟ್ಟಂತೆ ಸದಾ ಕ್ರಿಯಾಶೀಲವಾಗಿ, ವರ್ಷದುದ್ದಕ್ಕೂ ಜೀವಂತಿಕೆಯಿಂದ ತುಡಿಯುತ್ತಲಿದೆ. ನಾಟಕಗಳಷ್ಟೆ ಅಲ್ಲದೆ ರಂಗಭೂಮಿಯ ವಿವಿಧ ಮಜಲುಗಳನ್ನು ಏರುತ್ತಿರುವ ನಟನ ಮಕ್ಕಳ ರಂಗಭೂಮಿಗೂ ಜೀವ ತುಂಬುತ್ತಾ ಆಗಾಗ ಕಾರ್ಯಾಗಾರ, ಶಿಬಿರ, ಕಮ್ಮಟಗಳನ್ನು, ಸಿನಿಮಾ ರಸಗ್ರಹಣ ಶಿಬಿರಗಳನ್ನು ಹಮ್ಮಿಕೊಳ್ಳುತ್ತಾ ಸದಭಿರುಚಿಯ ವಿಚಾರಗಳಿಗೆ ವೇದಿಕೆಯಾಗುತ್ತಿದೆ. ಅವರ ಕುರಿತ ಹೆಚ್ಚಿನ ಮಾಹಿತಿಗೆ www.natana.org ನ್ನು ಸಂಪರ್ಕಿಸಬಹುದು.


ರಂಗಮನೆಯ ಚಿಣ್ಣರು ಪ್ರದರ್ಶಿಸಿದ 'ಢಾಣ ಡಂಗುರ' ನಾಟಕದ ದೃಶ್ಯ

ಅಂತೆಯೇ ದಕ್ಷಿಣಕನ್ನಡದ ಸುಳ್ಯ ತಾಲೂಕಿನ 'ರಂಗಮನೆ –ಸಾಂಸ್ಕೃತಿಕ ಕಲಾಕೇಂದ್ರ'ವೂ ಕೂಡಾ ! ನೀನಾಸಂ ಪಧವೀಧರ, ಹೆಸರಾಂತ ರಂಗಕರ್ಮಿ ಜೀವನ್‌ರಾಮ್ ಸುಳ್ಯ ಅವರ ನೇತೃತ್ವದಲ್ಲಿ ಮುನ್ನಡೆಯುತ್ತಿರುವ ಸುಳ್ಯದ ಕಲಾಸಕ್ತ ಮಕ್ಕಳ ವೃಂದ ಮತ್ತು ಆಳ್ವಾಸ್ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳ ತಂಡಗಳು ಈಗಾಗಲೇ ತಮ್ಮ ಜೈತ್ರಯಾತ್ರೆಯನ್ನು ಕರ್ನಾಟಕದಲ್ಲಷ್ಟೇ ಅಲ್ಲದೆ, ಹೊರರಾಜ್ಯಗಳಲ್ಲೂ ಕೈಗೊಂಡಿದ್ದಾರೆ. ರಾಷ್ಟ್ರೀಯ ಮಟ್ಟದ ಅನೇಕ ನಾಟಕ ಸ್ಪರ್ಧೆಗಳಲ್ಲಿ ಸತತ ಪ್ರಥಮ ಪ್ರಶಸ್ತಿ ಪಡೆಯುತ್ತಿರುವ ಜೀವನ್‌ರಾಮ್ ನಿರ್ದೇಶನದ ಬಳಗ ಯುವ ಮತ್ತು ಮಕ್ಕಳಲ್ಲಡಗಿದ ಪ್ರತಿಭೆ ಮತ್ತು ಸಾಧನೆಯ ಜೊತೆಗೆ, ಸಮರ್ಥ ನಾಯಕತ್ವದ ನಿರ್ದೇಶನಕ್ಕೆ ಕನ್ನಡಿ ಹಿಡಿದಿದೆ. ಮಾತ್ರವಲ್ಲದೆ ರಂಗಭೂಮಿಯ ಕುರಿತಾಗಿ ಹಲವು ನಾಟಕ ಸ್ಪರ್ಧೆ, ಜಾದೂ ಮತ್ತು ಜಾನಪದ ಸಂಸ್ಕೃತಿಗಳ ಕುರಿತಾಗಿ ಕಾರ್ಯಾಗಾರ, ಶಿಬಿರಗಳನ್ನು ಆಯೋಜಿಸುತ್ತಾ ಬಂದಿರುವ 'ರಂಗಮನೆ' ಯಕ್ಷಗಾನದ ಹಲವು ಆಶಯಗಳನ್ನು ವ್ಯಾಪಕವಾಗಿ ತನ್ನಲ್ಲಿ ಅಳವಡಿಸಿಕೊಳ್ಳುತ್ತಾ ಯಶಸ್ವೀ ರಂಗಪ್ರಯೋಗಗಳನ್ನು ಜನಮಾನಸಕ್ಕೆ ನೀಡುತ್ತಿದೆ.

ಇವರೆಲ್ಲರ ಆಶಯ, ಪ್ರಯತ್ನ ಮತ್ತಷ್ಟು ಸಾಕಾರಗೊಳ್ಳಲಿ.





## ದೀವಟಿಗೆ 2 ಶಿರಸಿಯಲ್ಲಿ ಮೊಟ್ಟ ಮೊದಲ 'ಕಥಕ್' ಡಿಪ್ಲೋಮಾ ತರಗತಿ

● ಎನ್ವೀ. ವೈದ್ಯ ಹೆಗ್ಗಾರ್.



**ಕ**ಲೆ, ಸಾಹಿತ್ಯ, ಸಾಂಸ್ಕೃತಿಕ ಜಗತ್ತಿನೆಡೆಗೆ ಹೊಸ ತಲೆಮಾರಿನವರು ಬೆರಗುಗಣ್ಣಿನಿಂದ ನೋಡುತ್ತಿದ್ದಾರೆ. ಇನ್ನೂ ಗುರು ಶಿಷ್ಯ ಪರಂಪರೆಯ ಜೀವಂತಿಕೆಯನ್ನು ಕಾಯ್ದುಕೊಂಡಿರುವುದು ಈ ಕ್ಷೇತ್ರಗಳು ಮಾತ್ರ. ಇಂದಿನ ತುರ್ತಿಗೆ ಈ ವಿದ್ಯಾ ಕೇಂದ್ರಗಳು ಕಿರಿದಾಗುತ್ತಿವೆ. ಸಂಗೀತದೆಡೆಗೆ, ಶಾಸ್ತ್ರೀಯ ನೃತ್ಯ ಕಲಿಕೆಯೆಡೆಗೆ ಈ ಮೊದಲಿಗೆ ಹೋಲಿಸಿದರೆ ಸಾಗರೋಪಾದಿಯಲ್ಲಿ ಹೊಸಬರ ಆಗಮನವಾಗುತ್ತಿದೆ.

ಅಲ್ಲಲ್ಲಿ ಈ ವಿಷಯಗಳನ್ನಾಧರಿಸಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಕೂಡ ನಡೆಸಲಾಗುತ್ತಿದೆ. ಈ ನಿಟ್ಟಿನಲ್ಲಿ ಉತ್ತರ ಕನ್ನಡದ ಶಿರಸಿಯ ಎಂ.ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ ಹೊಸ ಹೆಜ್ಜೆಯನ್ನಿರಿಸಿದೆ. ತನ್ನ ಸಂಗೀತ ವಿಭಾಗದ ಮೂಲಕ ಒಂದು ವರ್ಷದ 'ಕಥಕ್' ಡಿಪ್ಲೋಮಾ ಕೋರ್ಸನ್ನು ಪ್ರಾರಂಭಿಸಿದೆ. ಈಗಾಗಲೇ ತರಗತಿಗಳು ಪ್ರಾರಂಭವಾಗಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಸಮಾಜದ ನಾನಾ ಸ್ಥರಗಳಲ್ಲಿ ಉದ್ಯೋಗ ಮಾಡುತ್ತಿರುವ 25 ಮಂದಿ ಮೊದಲ ಹಂತದಲ್ಲಿ ಕಥಕ್ ಅಭ್ಯಾಸ ಮಾಡುತ್ತಿದ್ದಾರೆ. ಬೆಂಗಳೂರಿನ 'ನಾಟ್ಯ ಇನ್‌ಸ್ಟಿಟ್ಯೂಟ್ ಆಫ್ ಕಥಕ್ ಮತ್ತು ಕೋರಿಯೋಗ್ರಫಿ' ಈ ಕೋರ್ಸಿನ ಪಠ್ಯಕ್ರಮವನ್ನು ಸಿದ್ದಪಡಿಸಿದೆ.

ಖ್ಯಾತ ನೃತ್ಯ ಕಲಾವಿದೆ ಮಾಯಾರಾವ್ , ಜನಾರ್ಧನರಾಜ್ ಅರಸ್ ನೃತ್ಯ ತರಭೇತಿ ನೀಡುತ್ತಿದ್ದಾರೆ. ವಾರದಲ್ಲಿ ನಾಲ್ಕು ದಿನ ತರಗತಿಗಳು ನಡೆಯುತ್ತವೆ. ಕಾಲೇಜಿನ ವಿದ್ಯಾರ್ಥಿಗಳಿಗಷ್ಟೇ ಈ ಕೋರ್ಸ್ ಸೀಮಿತವಾಗಿಲ್ಲ. ಎಸ್.ಎಸ್,ಎಲ್.ಸಿ. ಪಾಸಾದ ಯಾರು ಬೇಕಾದರೂ ಇದರಲ್ಲಿ ಪಾಲ್ಗೊಳ್ಳಬಹುದು. ಕಳೆದ ಹಲವು ವರ್ಷಗಳಿಂದ ಸಂಗೀತ ಕ್ಷೇತ್ರಕ್ಕೆ ಮೌಲಿಕ ಕೊಡುಗೆ ನೀಡುತ್ತಿರುವ ಇಲ್ಲಿಯ ಸಂಗೀತ ವಿಭಾಗವು ನೃತ್ಯವನ್ನೂ ತನ್ನ ಜೊತೆ ಸೇರಿಸಿಕೊಂಡಿದ್ದು ಉತ್ತಮ ಬೆಳವಣಿಗೆ. ಆಸಕ್ತರು ಎಂ.ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಎಸ್.ಐ. ಭಟ್ ಅವರಿಂದ (9448441091) ಈ ಕೋರ್ಸ್ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಬಹುದು.

(ಲೇಖಕರು ಕವಿ, ಪತ್ರಕರ್ತರು)

ದರ್ಪಣ

# ನೃತ್ಯ ರಂಗದ ಅನಭಿಷಿಕ್ತ ರಾಣಿ: ರುಕ್ಮಿಣಿ

**...... ಈವರೆಗೆ**

**ನೃತ್ಯದ ಬಗೆಗಿನ ತುಡಿತ ರುಕ್ಮಿಣಿಯರನ್ನು ಕರೆ ತಂದದ್ದು ಸಾದಿರ್ ನೃತ್ಯಾಭ್ಯಾಸಕ್ಕೆ. ತಂಜಾವೂರ್ ಸಹೋದರರ ಮೊಮ್ಮಗ ಮೀನಾಕ್ಷಿ ಸುಂದರಂ ಪಿಳ್ಳೈ ಅವರ ಮಾರ್ಗದರ್ಶನದಲ್ಲಿ ರುಕ್ಮಿಣಿಯವರ ನೃತ್ಯ ಕಲಿಕೆ ಸಾಗುತ್ತದೆ. 1935, ಡಿಸೆಂಬರ್. ಥಿಯೋಸೋಫಿಕಲ್ ಸೊಸೈಟಿಯ ವಜ್ರ ಮಹೋತ್ಸವ ವರ್ಷ.. ರುಕ್ಮಿಣಿಯವರ ಮೊದಲ ಸಾದಿರ್ ನೃತ್ಯ ಪ್ರದರ್ಶನವದು..! ಒಂದರ್ಥದಲ್ಲಿ ಅವರು ಮೊದಲು ರಂಗಪ್ರವೇಶ ಮಾಡಿದ್ದು..)**



ಆಗಿನ ಕಾಲದಲ್ಲಿ ನೃತ್ಯವನ್ನು ನಡೆಸಿಕೊಳ್ಳಲಾಗುತ್ತಿದ್ದ ಕ್ರಮಕ್ಕೆ ಮತ್ತು ನೃತ್ಯ ಪ್ರದರ್ಶಿಸುವ ಪದ್ಧತಿ ನೋಡಿ ಹಲವು ಮಡಿವಂತರು, ಕಲಾಸಕ್ತರು ಸಾದಿರ್ ಎಂದರೆ ಸಾಕು, ಮೂಗು ಮುರಿಯುತ್ತಿದ್ದರು. ಆಗಿನ ಕಾಲದ ಶ್ರೀನಿವಾಸ ಶಾಸ್ತ್ರಿ, ಸಿ.ಪಿ. ರಾಮಸ್ವಾಮಿ ಅಯ್ಯರ್, ಪಿ. ಶಿವಸ್ವಾಮಿ ಅಯ್ಯರ್ ಅವರಂತಹ ವಿದ್ವನ್ಮಣಿಗಳು ನೃತ್ಯದ ಅವಸ್ಥೆ ಕಂಡು ಯಾವುದೇ ಪ್ರದರ್ಶನಕ್ಕೂ ಕಾಲಿಡುತ್ತಿರಲಿಲ್ಲ. ಇಂತಹುದೇ ಒಂದು ಸಂದರ್ಭದಲ್ಲಿ ರುಕ್ಮಿಣಿಯವರ ಮೊದಲ ರಂಗಪ್ರವೇಶ. ಕಲಾಸಕ್ತರನ್ನು ಸೆಳೆಯುವುದು ಅಷ್ಟು ಸುಲಭದ ಮಾತೇ?

ರುಕ್ಮಿಣಿ ಅರುಂಡೇಲ್ ಅವರು ಇಂತಹ ವಿದ್ವನ್ಮಣಿಗಳನ್ನು ಬೇಡಿ ಕರೆಸಿಕೊಂಡಿದ್ದರು. ಅಂದು ರುಕ್ಮಿಣಿ ಅವರೇ ಹೆಣೆದ ಶೈಲಿಯಲ್ಲಿ ಮಾರ್ಗ ಪದ್ಧತಿ ಅಂದರೆ ಸಿದ್ಧಪಡಿಸಿದ ನೃತ್ಯ ಕ್ರಮದ ಮೂಲಕ ಸಾದಿರ್‌ನ್ನು ಪ್ರದರ್ಶನ. ಆದರೆ ಕಾಲ–ಸಮಯವನ್ನು ಮೀರಿ ನೆರೆದವರನ್ನು ಭಾವಪರವಶಗೊಳಿಸಿದ್ದು ಈಗ ಇತಿಹಾಸ. ನೃತ್ಯವೂ ಅಂತದ್ದೊಂದು ದೈವಿಕ ಅನುಭೂತಿಯನ್ನು ನೀಡಬಲ್ಲುದು ಎಂಬ ಸನಾತನ ನುಡಿಗೆ ಸಾಕ್ಷಿಯೆನಿಸಿತು.

ರುಕ್ಮಿಣಿಯವರ ನೃತ್ಯಕ್ಕೆ ಬೆರಗಾಗದವರು ಯಾರು? ಐರಿಶ್ ಕವಿ ಜೇಮ್ಸ್ ಕಸಿನ್ಸ್ ನಿಂದ ಮೊದಲ್ಗೊಂಡು ಹಲವು ವಿದೇಶಿ ಪಂಡಿತರೂ ಕೂಡಾ ಭಾರತೀಯ ನೃತ್ಯಕ್ಕೆ ಮನಸೋತರು, ರೋಮಾಂಚನಗೊಂಡರು.





ಈ ಪ್ರದರ್ಶನ ಕಲಾಸಕ್ತರಿಗಿಂತಲೂ ಹುರುಪು ತಂದಿತ್ತದ್ದು ರುಕ್ಮಿಣಿ ಮತ್ತು ಅವರ ಪತಿ ಅರುಂಡೇಲ್ ಅವರಿಗೆ. ಇಂಥಹ ಕಾರ್ಯಕ್ರಮಗಳ ಮೂಲಕ ಮತ್ತಷ್ಟು ಸುಧಾರಣೆಗಳನು ಮಾಡುವ ಉತ್ತೇಜನ ದೊರೆತಿತ್ತು. ಒಳ್ಳೆಯ ವಿಷಯಗಳನ್ನು ಒಳ್ಳೆಯ ರೀತಿಯಲ್ಲಿ ಒಳ್ಳೆಯ ವೇದಿಕೆಯಲ್ಲಿ ಹೇಳಿದರೆ ಉತ್ತಮ ಬದಲಾವಣೆಗಳನ್ನು ನಿರೀಕ್ಷಿಸಲು ಸಾಧ್ಯ ಎಂದು ಅನಿಸಿತ್ತು. ಹೀಗಾಗಿ ಅವರ ಯೋಚನೆ ರೂಪ ತಾಳಿದ್ದು ಇಂಟರ್ ನ್ಯಾಷನಲ್ ಅಕಾಡೆಮಿ ಆಫ್ ಆರ್ಟ್ಸ್ ಎಂಬ ಸಂಸ್ಥೆಯ ಮೂಲಕ.

ಆ್ಯನಿ ಬೆಸೆಂಟ್ ಅವರ ಕನಸಿನ ಕೂಸು ಇದು. ಭಾರತೀಯ ಕಲೆಗಳಿಗೆ ಮೋಂಟೆಸ್ಸರಿ ಪದ್ಧತಿಯ ಶಿಕ್ಷಣವನ್ನು ವಿಸ್ತರಿಸಿ, ಅಕಾಡೆಮಿಕ್ ಮಾನ್ಯತೆ ನೀಡಿ ಸಮಾಜದ ಪ್ರಮುಖ ವಾಹಿನಿಯಲ್ಲಿ ತಂದಿರಿಸಬೇಕೆಂಬ ಧ್ಯೇಯ ಹೊತ್ತು ಹೊರಟ ಸಂಸ್ಥೆ. ಪ್ರಾಥಮಿಕ, ಮಾಧ್ಯಮಿಕ, ಕಾಲೇಜು ವಿದ್ಯಾಭ್ಯಾಸದೊಂದಿಗೆ ಸುಸಜ್ಜಿತ ಗ್ರಂಥಾಲಯ, ಕರಕುಶಲ ವಸ್ತು ತರಬೇತಿ ಸಂಸ್ಥೆ, ಗೃಹ ಕೈಗಾರಿಕೆ.., ಹೀಗೆ ಹತ್ತು ಹಲವು ಕೋರ್ಸ್‌ಗಳು ಸಣ್ಣ ಮಟ್ಟಿಗೆ ಪ್ರಾರಂಭವಾದವು. ಭಾರತದಲ್ಲಿ ಮೊದಲ ಬಾರಿಗೆ ಪತ್ರಿಕೋದ್ಯಮ ಶಿಕ್ಷಣ ನೀಡುವ ಡಿಪ್ಲೊಮಾ ಪದವಿ ಪ್ರಾರಂಭವಾದದ್ದೂ ಇಲ್ಲಿಯೇ ! ರುಕ್ಮಿಣಿ ಅರುಂಡೇಲ್, ಅವರ ಪತಿ ಜಾರ್ಜ್ ಅರುಂಡೇಲ್, ಇ. ಕೃಷ್ಣ ಅಯ್ಯರ್ ಅವರಂತಹ ಹಲವು ಮಹನೀಯರನ್ನು ಬಗಲಿಗಿರಿಸಿಕೊಂಡು ೧೯೩೬ರಲ್ಲಿ ತಮಿಳುನಾಡಿನ ಅಡೆಯಾರ್ ಗ್ರಾಮದಲ್ಲಿ ಸ್ಥಾಪನೆಗೊಂಡಿತು.



ಸ್ಥಾಪನೆಗೊಂಡರೆ ಸಾಕೇ ! ಸಕಾಲಿಕವಾದ ಪದ್ಧತಿಗಳು ಬೇಡವೇ? ಹೀನಾಯ ಸಂಪ್ರದಾಯಗಳನ್ನು, ಕಳಂಕಗಳನ್ನು ತೊಡೆಯಬೇಡವೇ? ಹಲವು ಸಂಕಟ, ಸಂಕಷ್ಟ, ಮೂದಲಿಕೆಗಳ ನಡುವೆಯೇ ರುಕ್ಮಿಣೀದೇವಿ, ಕೃಷ್ಣ ಆಯ್ಯರ್, ಕುಂಭಕೋಣಂ ಕೆ. ಭಾನುಮತಿ ಮತ್ತು ಟಿ. ಬಾಲಸರಸ್ವತಿ ಹೀಗೆ ನೃತ್ಯ ಕ್ಷೇತ್ರದ ವಿದ್ವಾಂಸರು ಸಾದಿರ್‌ನ್ನು ಪರಿಷ್ಕರಿಸಲು ಮುಂದಾದರು. ರುಕ್ಮಿಣೀ ಅವರ ಪ್ರಥಮ ಗುರು ಮುತ್ತುಕುಮಾರ ಪಿಳ್ಳೈ ಅವರನ್ನೂ ಸೇರಿದಂತೆ ಮೀನಾಕ್ಷಿ ಸುಂದರಂ ಪಿಳ್ಳೈ, ಚೊಕ್ಕಲಿಂಗಂ ಪಿಳ್ಳೈ, ಕಾರೈಕ್ಕಲ್ ಶಾರದಾಂಬಳ್ ಅಮ್ಮಳ್, ದಂಡಾಯುಧಪಾಣಿ ಪಿಳ್ಳೈ, ಮೈಲಾಪುರ ಗುರೀ ಅಮ್ಮಳ್ ಮುಂತಾದ ನಟ್ಟುವನ್ನಾರ್‌ಗಳು, ಗುರುಗಳೂ ಕೈಜೋಡಿಸಿದರು. ಅದರ ಫಲವೇ ಭರತನಾಟ್ಯ.

ನೃತ್ಯಕ್ಕೆ ಮನ್ನಣೆ ನೀಡುವಲ್ಲಿ ಸೂಕ್ತವಾದ, ಪೂಜನೀಯವೆನಿಸುವ ಹೆಸರೊಂದು ಬೇಕು ಎಂದು ಅವರಿಗೆ ಅನ್ನಿಸಿದ್ದೇ ತಡ, ನಾಟ್ಯಶಾಸ್ತ್ರದ ಪ್ರವರ್ತಕನೆನಿಸಿದ ಭರತ ಮತ್ತು ಆತನ ಗ್ರಂಥದ ಹೆಸರಿನಿಂದ ಮೊದಲ್ಗೊಳ್ಳುವ ನಾಮಧೇಯವೇ ಸಮಂಜಸವೆನಿಸಿತು. ಮಾತ್ರವಲ್ಲ ಭರತ ಎಂಬ ಮೂರಕ್ಷರದ ಪದದಲ್ಲಿ ಅಭಿವ್ಯಕ್ತಿಯ ಅವಶ್ಯಕ ಅಂಶಗಳಾದ ಭಾವ, ರಾಗ, ತಾಳವನ್ನು ಸಂಯೋಜನೆ ದೊರೆಯುತ್ತದೆ ಎಂದಾದ ಮೇಲೆ ಅದಕ್ಕಿಂತ ಸೂಕ್ತ ಇನ್ನಾವುದಿದೆ? ಮಾತ್ರವಲ್ಲ, ಶತಶತಮಾನಗಳಿಂದಲೂ ಚಾಲ್ತಿಯಲ್ಲಿದ್ದರೂ ಹಲವು ಬದಲಾವಣೆಗಳಿಗೆ ಸಾಕ್ಷಿಯಾಗಿ ದುರಂತ ಅಂತ್ಯ ಎದುರಿಸಲಿದ್ದ ಕಲಾಪ್ರಕಾರಕ್ಕೆ, ಅದರ ಸನಾತನ ಭವ್ಯತೆಯನ್ನು ಮತ್ತೆ ಪ್ರತಿಷ್ಠಾಪಿಸಲು



ಭರತನಾಟ್ಯ ಎಂಬ ಹೆಸರಿಗಿಂತ ಮತ್ಯಾವ ಹೆಸರು ಸರಿಯೆನ್ನಿಸೀತು ? ಹಾಗಾಗಿ ನಂತರದ ವರುಷಗಳಲ್ಲಿ ಸಾದಿರ್, ಕೂತ್ತು, ದಾಸೀ ಆಟ್ಟಂ ಎಂದೆಲ್ಲಾ ಕರೆಸಿಕೊಂಡ ನೃತ್ಯಪ್ರಕಾರ ಭರತನಾಟ್ಯವೆಂಬ ಹೆಸರಿನಿಂದ ಪ್ರಸಿದ್ಧವಾಯಿತು.

ಇಂದಿಗೂ ಭರತನಾಟ್ಯ ಎಂಬ ಪದದ ಬಳಕೆಯ ಬಗೆಗೆ ಸಾಕಷ್ಟು ಜಿಜ್ಞಾಸೆಗಳಿವೆ. ನಾಟ್ಯಕ್ಕಿಂತಲೂ ನೃತ್ಯಕ್ಕೆ ಹತ್ತಿರವಾದ ಈ ಪ್ರಕಾರಕ್ಕೆ ಭರತನಾಟ್ಯ ಎಂಬ ಪದಕ್ಕಿಂತಲೂ ಭರತನೃತ್ಯ ಎಂಬ ಪದವೇ ಹೆಚ್ಚು ಸೂಕ್ತ ಎಂಬುದು ಒಂದು ವಾದವಾದರೆ, ಭಾರತದಲ್ಲಿ ಪ್ರಚಲಿತದಲ್ಲಿರುವ ಎಲ್ಲಾ ನಾಟ್ಯಗಳು ಭರತನ ನಾಟ್ಯಶಾಸ್ತ್ರವನ್ನು ಆಧರಿಸಿರುವುದರಿಂದ ಎಲ್ಲಾ ನೃತ್ಯಪದ್ಧತಿಗಳೂ ಭರತನಾಟ್ಯವೇ ಹೌದು; ಮೊದಲ್ನೋಟಕ್ಕೆ ಭರತನು ಆಡಿದ ನಾಟ್ಯವೇ ಇದು, ನಾಟ್ಯಶಾಸ್ತ್ರ ಈ ನೃತ್ಯದ ಮೇಲೆಯೇ ಹೆಣೆದಿರುವ ಗ್ರಂಥ ಎಂಬ ತಪ್ಪು ಅಭಿಪ್ರಾಯಕ್ಕೆ ಪುಷ್ಠಿ ದೊರೆಯುತ್ತದೆ ; ಹಾಗಾಗಿ ಇದು ಸಾದಿರ್ ಎನ್ನಲಷ್ಟೇ ಸಮಂಜಸ ಎಂಬುದು ಮತ್ತೊಂದು ಬಗೆಯದು. ಏನೇ ಇರಲಿ, ದೇವದಾಸಿಗೆ ಅಂಟಿದ್ದ ಸಾದಿರ್ ಆಗಿದ್ದ ಪದ್ಧತಿ ಭರತನಾಟ್ಯವಾಗಿತ್ತು.

ಸಾದಿರ್‌ನ್ನು ಭರತನಾಟ್ಯ ಎಂದಾಕ್ಷಣ ಎಲ್ಲವೂ ಮಾನ್ಯಗೊಳ್ಳುತ್ತದೆಯೇ ? ರುಕ್ಮಿಣೀದೇವಿ ಪ್ರಯತ್ನಕ್ಕೆ ಶುರುವಿಟ್ಟರು. ಸಾದಿರ್‌ನಲ್ಲಿ ಇದ್ದ ಅತಿರಂಜಿತ, ನಿಕೃಷ್ಟವೆನಿಸುವ ಶೃಂಗಾರದ ಬದಲು, ಭಕ್ತಿಯನ್ನು ಹೆಚ್ಚಾಗಿ ತುಂಬಿದರು. ಅತೀ ಎನಿಸುವ ಶೃಂಗಾರವನ್ನು ತೆಗೆದು ಹಾಕಿ ಅಂತಹ ಭಾವಗಳಿಗೆ ಗುಣಮಟ್ಟದ ಅಭಿನಯ ತಂದರು. ದೇವದಾಸಿಯರು ವೇಶ್ಯೆಯರು ಬಳಸುತ್ತಿದ್ದ ಸಂಗೀತ, ಸಾಹಿತ್ಯಗಳಿಗೆ ಬದಲಾಗಿ ಸಾಂಪ್ರದಾಯಿಕ ಜನಪದ ನೃತ್ಯಗಳನ್ನು, ಭಕ್ತಿಪ್ರಧಾನ ಕಥೆಗಳನ್ನು ಉಪಯೋಗಿಸಿದರು. ನೃತ್ಯದ ಶೈಲಿಗಳಲ್ಲಿ ಒಂದೆನಿಸಿದ್ದ ಪಂದನಲ್ಲೂರು ಶೈಲಿಯನ್ನು ಪರಿಷ್ಕರಿಸಿದರು.

ನೃತ್ಯಕ್ಕೆ ಅಗತ್ಯವೆನಿಸುವ ಅಡವು–ಹೆಜ್ಜೆಗಳನ್ನು ವ್ಯಾಪಕವಾಗಿ ಬಳಸಲು ಆರಂಭಿಸಿದರು. ನಾಟ್ಯಶಾಸ್ತ್ರ, ಅಭಿನಯ ದರ್ಪಣ ಮುಂತಾದ ಗ್ರಂಥಗಳಲ್ಲಿ ಕಂಡುಬರುವ ಹಸ್ತ ಮುದ್ರಾ ವಿನ್ಯಾಸಗಳನ್ನು ಕ್ರಮವತ್ತಾಗಿ ಜಾರಿಗೆ ತಂದರು. ಮುಖ್ಯವಾಗಿ ನೃತ್ಯದ ಪ್ರತೀ ನಡೆ–ನುಡಿಯಲ್ಲೂ ತಾಳ–ಲಯಗಳಿಗೆ ತಕ್ಕುದಾಗಿ ನರ್ತಿಸುವ ಕ್ರಮಬದ್ಧತೆಯನ್ನು ಅಳವಡಿಸಿದರು. ಹೀಗೆ ಪಂದನಲ್ಲೂರು ಶೈಲಿಯಿಂದ ವಿಭಿನ್ನ ಆಯಾಮ ಪಡೆದ ಈ ಶೈಲಿ ಕಲಾಕ್ಷೇತ್ರ ಶೈಲಿಯೆಂದು ಪ್ರಸಿದ್ಧವಾಯಿತು. ಕ್ರಮೇಣ ಇಂಟರ್ ನ್ಯಾಷನಲ್ ಅಕಾಡೆಮಿ ಆಫ್ ಆರ್ಟ್ಸ್ ಎಂಬ ಸಂಸ್ಥೆ ಕಲೆಗಳಿಗೆಲ್ಲಾ ಮನ್ನಣೆ ನೀಡುವ ಕ್ಷೇತ್ರವಾಗಿ, ಅಂತರಾಷ್ಟ್ರೀಯ ಕಲಾ ಅಕಾಡೆಮಿಯಾಗಿ ಕಲಾಕ್ಷೇತ್ರವೆಂದು ಕರೆಸಿಕೊಂಡಿತು. ಮುಖ್ಯವಾಗಿ ಕಲಾಕ್ಷೇತ್ರ ಎಂಬ ಹೆಸರನ್ನಿಡಲು ಪ್ರೇರಣೆ ದೊರೆತದ್ದು ಪಂಡಿತ ಎಸ್. ಸುಬ್ರಹ್ಮಣ್ಯ ಶಾಸ್ತ್ರಿಗಳಿಂದ !

ಸಣ್ಣ ಕನಸು. ಆದರೆ ಇಷ್ಟು ದೊಡ್ಡದಾಗಿ ಬೆಳೆಯಬಹುದೆಂಬ ನಿರೀಕ್ಷೆಯೇ ಯಾರಿಗೂ ಇರಲಿಲ್ಲವಂತೆ. ಆದರೆ ಜನ ಈ ಸುಧಾರಣೆಗಳನ್ನು ಸ್ವೀಕರಿಸಿದರೇ? ಆಡೆಯಾರ್‌ನ ಕಲಾಕ್ಷೇತ್ರ ಅಲ್ಲಿಯೇ ಮುಂದುವರೆಯುವಂತಾಯಿತೇ?

(ಸಶೇಷ)





## ನಿಮ್ಮ ಬರಹ ನಮ್ಮ ಓದು...



ರಾಜ್ಯ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಕುಂಬ್ಳೆ ಸುಂದರ ರಾವ್, ಉಡುಪಿಯ ಉಚ್ಚಿಲದ ನಟೇಶ ನೃತ್ಯ ನಿಕೇತನದ ನಿರ್ದೇಶಕಿ ವಿದುಷಿ ಮಂಗಳಾ, ಯಕ್ಷಗಾನ ನಿರ್ದೇಶಕ ಬನ್ನಂಜೆ ಸಂಜೀವ ಸುವರ್ಣ, ಪರ್ಕಳದ ಡಾ. ಎನ್.ಟಿ. ಭಟ್, ಮಡಿಕೇರಿಯ ಬೆನಕ ಹೆಲ್ತ್ ಕೇರ್ ಸೆಂಟರ್‌ನ ಆಯುರ್ವೇದ ವೈದ್ಯ ಡಾ. ನಡಿಬೈಲು ಉದಯಶಂಕರ್, ಗಣೇಶ್ ಮೆಡಿಕಲ್ಸ್‌ನ ಪುರುಷೋತ್ತಮ ಭಟ್, ಪ್ರಸಿದ್ಧ ವಿಮರ್ಶಕ ಪ್ರಭಾಕರ ಜೋಷಿ, ಮಂಗಳೂರಿನ ಅತ್ರಿ ಬುಕ್ ಸ್ಟೋರ್‌ನ ಅಶೋಕವರ್ಧನ, ಉಡುಪಿಯ ಯಕ್ಷಗಾನ ಕಲಾರಂಗ, ಹರಿಹರಪುರದ ಪ್ರಭೋಧಿನಿ ಗುರುಕುಲದ ಗಣ್ಯರು, ಭ್ರಾಮರೀ ನೃತ್ಯಾಲಯದ ವಿದ್ವಾನ್ ಭವಾನಿ ಶಂಕರ್, ಮಣಿಪಾಲದ ನೃತ್ಯ ಕಲಾವಿದೆ ಶ್ರೀಪ್ರಜ್ಞಾ, ಪ್ರೊ. ಉದ್ಯಾವರ ಮಾಧವ ಆಚಾರ್ಯ, 'ಹೆಜ್ಜೆ ಗೆಜ್ಜೆ'ಯ ವಿದುಷಿ ಯಶಾ ರಾಮಕೃಷ್ಣ, ಕಲಾವಿದರಾದ ವಸುಮತಿ ಭಟ್, ಮಂಜರೀಪ್ರಸಾದ್ ಸನಿಲ್, ಹರ್ಷಿತಾ ಚಿತ್ಪಾಡಿ, ಕೊಪ್ಪದ ಮಮತಾದತ್ತ, ದೊಡ್ಡಣ್ಣಗುಡ್ಡೆಯ ಎಚ್. ಎಲ್ ಮೇಘನಾ, ದಿಶಾ, ಅಲೆವೂರಿನ ಬಿ.ಸುಬ್ರಹ್ಮಣ್ಯ ರಾವ್, ಶಿಲ್ಪಾ, ರೂಪಾರಾವ್, ಬೈಲೂರಿನ ಪ್ರಕಾಶ್ ಭಟ್, ಲಕ್ಷ್ಮೀನಾರಾಯಣ ಆಚಾರ್ಯ, ಕೊರಂಗ್ರಪಾಡಿಯ ಶರಣ್ಯ. ವಿ.ನಾಯಕ್, ಕೀರ್ತನಾ, ಉಳಿಯಾರದ ಕವಿತಾ, ಕೊಕ್ಕಿಕಟ್ಟೆಯ ಸ್ನೇಹಾ ಮತ್ತು ವಿದ್ಯಾ, ಮದ್ದಳೆ ವಾದಕ ಅನಂತಕೃಷ್ಣ ಪಾಠಕ್ ಪತ್ರಿಕೆಗೆ ಅಭಿನಂದನೆ ಸಲ್ಲಿಸಿ ಈ ಸಾಲಿನ ವರ್ಷದ ಸದಸ್ಯರಾಗಿದ್ದಾರೆ.

ಇವರಷ್ಟೇ ಅಲ್ಲದೆ ಬೆಂಗಳೂರಿನ ಲೇಖಕ ಮಹೇಶ್ ಪ್ರಭು, ಶೃಂಗೇರಿಯ ನವೀನ್ ಭಟ್ ಗಂಗೋತ್ರಿ, ಮಂಗಳೂರು ಕರ್ನಾಟಕ ವಿಕಾಸ ಬ್ಯಾಂಕ್ ಶಾಖೆಯ ನಾರಾಯಣ ಯಾಜಿ ಶುಭ ಹಾರೈಸಿ ಪ್ರತಿಕ್ರಿಯಿಸಿದ್ದಾರೆ.

* * *   * * *

ಮಂಟಪರು ನಡೆದು ಬಂದ ದಾರಿ, ಪ್ರತಿಭೆಯನ್ನು ಒರೆಗೆ ಹಚ್ಚುವ ಕೆಲಸ ಮಾಡಿದ ಶತಾವಧಾನಿ ಡಾ. ಆರ್. ಗಣೇಶ್‌ರ ಮಾರ್ಗದರ್ಶನದ ಕುರಿತಾಗಿ ಮೂಡಿ ಬಂದ ಸಂದರ್ಶನ ಉತ್ತಮ. ಪುರಾಣ ಗರ್ಭದಲ್ಲಿರುವ ಅನರ್ಘ್ಯ ರತ್ನಗಳಿಗೆ ರೂಪ ಕೊಟ್ಟು ಪ್ರದರ್ಶಿಸುವ ಅವರ ಅಭಿನಯ ನಿಜಕ್ಕೂ ಆಹ್ಲಾದ ; ಆನಂದ ಸೃಷ್ಟಿ.

**'ಹುಡುಕಿ ಬಂದಿತ್ತು ಧ್ವನಿಯುಳ್ಳ ನೂಪುರ**
**ಪ್ರತಿ ಸಂಚಿಕೆಯಲ್ಲೂ ದರ್ಶಿಸಿದೆ ಆ ಗೋಪುರ'**

***– ಕುಂಬ್ಳೆ ಸುಂದರ ರಾವ್, ಅಧ್ಯಕ್ಷರು,***
ರಾಜ್ಯ ಯಕ್ಷಗಾನ ಅಕಾಡೆಮಿ, ಬೆಂಗಳೂರು.

**ವಾ**ರ್ಷಿಕ ಸಂಚಿಕೆ ಬಹಳ ಚೆನ್ನಾಗಿ ಬಂದಿದೆ. ಮಂಟಪರ ಸಂದರ್ಶನ ಬಹಳ ಹಿಡಿಸಿತು. ಜೊತೆಗೆ ಕೆರೆಮನೆ ಶಂಭು ಹೆಗಡೆಯವರ ಕುರಿತ ನುಡಿ ನಮನ ಕೂಡಾ ಚೆನ್ನಾಗಿ ಮೂಡಿ ಬಂದಿತ್ತು. ಇಂತಹ ಸದಭಿರುಚಿಯ ಪತ್ರಿಕೆಯನ್ನು ನೀವ್ಯಾಕೆ ಘನ ಸರ್ಕಾರದ ಮೂಲಕವಾಗಿ ಕರ್ನಾಟಕದ ಶೈಕ್ಷಣಿಕ ಸಂಸ್ಥೆ, ಶಾಲೆ-ಕಾಲೇಜುಗಳಿಗೆ ಕಳಿಸಿಕೊಡುವಂತೆ ಮಾಡಿ ಇನ್ನಷ್ಟು ಅರಿವನ್ನು ಕೊಡುವ ಪ್ರಯತ್ನ ಮಾಡಬಾರದು? ಈ ಕುರಿತು ಪ್ರಯತ್ನಿಸಿ. ಶುಭವಾಗಲಿ ನಿಮಗೂ ನಿಮ್ಮ ಬಳಗಕ್ಕೂ.

– ***ಬಾಲಸುಬ್ರಹ್ಮಣ್ಯ ಕಂಜರ್ಪಣೆ***
ನ್ಯಾಯವಾದಿಗಳು, ಸಾಹಿತಿ ಮತ್ತು
ಅಂಕಣಕಾರರು, ಮಡಿಕೇರಿ.

(ಧನ್ಯವಾದಗಳು. ನಿಮ್ಮ ಸಲಹೆ ಉತ್ತಮವಾಗಿದೆ. ನಾವು ಪ್ರಯತ್ನಿಸುತ್ತೇವೆ. ಈ ಕುರಿತಂತೆ ನಮ್ಮ ಜೊತೆಗೆ ಕೈಜೋಡಿಸುವ ಒಂದಷ್ಟು ಸಹೃದಯರ ಸಹಕಾರ ಅವಶ್ಯಕತೆಯಿದೆ. ಅವರ ನಿರೀಕ್ಷೆಯಲ್ಲಿದ್ದೇವೆ.

– ***ಸಂಪಾದಕೀಯ ಮಂಡಳಿ*** )

**ಸ**ನಾತನ ನಾಟ್ಯಾಲಯದಲ್ಲಿ ಫೆಬ್ರವರಿ 13, 2009 ರಂದು ನಡೆದ ನೂಪುರ ಭ್ರಮರಿಯ ಅನಾವರಣ ತುಂಬಾ ಮೆಚ್ಚುಗೆಯಾಯಿತು. ಸಂಚಿಕೆ ಸಂತೋಷ ಕೊಟ್ಟಿದೆ. ಅಂದವಾಗಿದೆ, ಚೆಂದವಾಗಿದೆ. ವಿಷಯ, ವಿವರ, ಬರೆಹ ಉತ್ತಮವಾಗಿತ್ತು. ಕಲಾತಪಸ್ವಿಗಳೂ, ಆತ್ಮೀಯರೂ ಆದ ಮಂಟಪ ಪ್ರಭಾಕರ ಉಪಾಧ್ಯಾಯರ ಸಂದರ್ಶನ, ಮಾಹಿತಿ ದರ್ಶನ ಭ್ರಮರಿಯ ಮೂಲಕ ಬಹಳ ಉತ್ತಮವಾಗಿ ಮೂಡಿಬಂದಿದೆ. ಅಭಿನಂದನೆಗಳು. ಅಭಿವಂದನೆಗಳು. ಕೀರ್ತಿ-ಯಶಸ್ಸು ಒಟ್ಟಿಗೆ ಬರುತ್ತಿರಲಿ.

– ***ಕಣ್ವತೀರ್ಥ ನಾರಾಯಣ ಭಟ್ಟ,***
ರಾಜಾಜಿನಗರ, ಬೆಂಗಳೂರು.

**ನೂ**ಪುರ ಭ್ರಮರಿ ಒಂದು ಮಾಹಿತಿಪೂರ್ಣ ಸಂಗ್ರಾಹ್ಯ ಪತ್ರಿಕೆ. ಕಲಾಪ್ರಿಯರಿಗೆ ನಿಜಕ್ಕೂ ಸೂಪರ್ ಎನಿಸುವ ಪತ್ರಿಕೆ.

– ***ವಿಶ್ವನಾಥ ಸುಂಕಸಾಳ ಮತ್ತು ಕಮಲಾಕರ ಹೆಗಡೆ,***
ಬೆಂಗಳೂರು

*ಸಂಚಿಕೆಗಾಗಿ ಸಹಕರಿಸಿದವರು*

ಶುಭಾಶಯಗಳೊಂದಿಗೆ

**ಮಂಟಪ ಪ್ರಭಾಕರ ಉಪಾಧ್ಯಾಯ**
ಏಕವ್ಯಕ್ತಿ ಯಕ್ಷಗಾನ ಸಾಮ್ರಾಟರು,
ಬೆಂಗಳೂರು.








**ನೂಪುರದ ದನಿಗೆ ಕಿವಿಯಾಗುವವರಲ್ಲಿ ಯುವ ಪತ್ರಕರ್ತ, ಭರವಸೆಯ ಬರಹಗಾರ ದಕ್ಷಿಣ ಕನ್ನಡದ ರಾಕೇಶ್ ಕುಮಾರ್ ಕಮ್ಮಜೆ ಅವರೂ ಒಬ್ಬರು. ಕಲೆ ಅದರಲ್ಲೂ ಯಕ್ಷಗಾನದ ಅಚ್ಚರಿಯ ಕಥೆಗಳಿಗೆ ಸಾಕ್ಷಿಯಾಗಬಲ್ಲ ಕಲಾಪ್ರೇಮಿ. ಈ ಬಾರಿಯ ಸಂಚಿಕೆಯಿಂದ ರಂಗಸ್ಥಳದ ಅಚ್ಚರಿಯ ಕಥೆಗಳನ್ನು ಹಂಚಿಕೊಳ್ಳಲಿದ್ದಾರೆ ತಮ್ಮ ರಂಗಸ್ಥಳದಲ್ಲಿ. ಓವರ್ ಟು ರಾಕೇಶ್...!**

# ಕೆಂಡ ತಂದಿಟ್ಟರೂ ‘ಕೆಂಡ’ವಾಗದ ನರಸಿಂಹ ಭಟ್

**● ರಾಕೇಶ್ ಕುಮಾರ್ ಕಮ್ಮಜೆ**

**ಇಂ**ದಿನ ತಲೆಮಾರಿನ ಯಕ್ಷಗಾನ ಆಸಕ್ತರಿಗೆ ನೆಡ್ಲೆ ನರಸಿಂಹ ಭಟ್ ಅನ್ನುವ ಅದ್ಭುತ ಚೆಂಡೆವಾದಕನ ಬಗ್ಗೆ ಹೆಚ್ಚಿಗೆ ಗೊತ್ತಿರಲಿಕ್ಕಿಲ್ಲ. ಆದರೆ ಮನೆಯಲ್ಲಿ ಅಪ್ಪನೋ ಅಜ್ಜನೋ ಯಕ್ಷಗಾನದ ಬಗ್ಗೆ ಹೇಳುತ್ತಿದ್ದರೆ ನೆಡ್ಲೆ ನರಸಿಂಹ ಭಟ್ ಅವರ ಹೆಸರು ಖಂಡಿತವಾಗಿಯೂ ಮಧ್ಯದಲ್ಲಿ ಬಂದು ಹಾದು ಹೋಗದಿರಲಿಕ್ಕಿಲ್ಲ. ಯಾಕೆಂದರೆ ಅವರ ಹೊರತಾಗಿ ಚೆಂಡೆ ಮದ್ದಳೆಗಳ ಕುರಿತಾಗಿ ಮಾತಾಡುವುದು ಕಷ್ಟ! ಅಷ್ಟರ ಮಟ್ಟಿಗೆ ನರಸಿಂಹ ಭಟ್ ಮತ್ತು ಚೆಂಡೆ ಮದ್ದಳೆಗಳು ಅನ್ಯೋನ್ಯ.

ನರಸಿಂಹ ಭಟ್ ಎಷ್ಟು ಸಜ್ಜನರಾಗಿದ್ದರೆಂದರೆ ಅವರು ಯಾರನ್ನೂ ನೋಯಿಸಲು ಇಷ್ಟಪಡುತ್ತಿರಲಿಲ್ಲ. ತಾನು ಮಹಾನ್ ಸಾಧಕನಾಗಿದ್ದರೂ ಆ ಹಮ್ಮಿರಲಿಲ್ಲ. ಯಾರಾದರೂ ಹೊಸದಾಗಿ ಚೆಂಡೆ ಬಾರಿಸಿ ನಂತರ ನರಸಿಂಹ ಭಟ್ಟರಲ್ಲಿ ನನ್ನ ಚೆಂಡೆ ಹೇಗಾಗಿದೆ ಎಂದು ಕೇಳಿದರೆ ನರಸಿಂಹ ಭಟ್ ಮೊದಲಿಗೆ ಹೇಳುತ್ತಿದ್ದ ಮಾತು ‘ ಓ ಬಹಳ ಚೆನ್ನಾಗಿತ್ತು’ ಅಂತ. ಮತ್ತೆ ನಿಧಾನವಾಗಿ ‘ಎಲ್ಲವೂ ಚೆನ್ನಾಗೇ ಆಗಿದೆ... ಓ ಅಲ್ಲಿ ಕರ್ಣನ ಪ್ರವೇಶ ಆಗುತ್ತದಲ್ಲ ಆಗ ಇನ್ನೂ ಸ್ವಲ್ಪ ಚೆಂಡೆ ಜೋರಾಗಬೇಕು..... ಉಳಿದಂತೇನೂ ಇಲ್ಲ, ಮತ್ತೆ.. ಹಾಗೆಯೇ ಸ್ವಲ್ಪ ಉರುಳಿಕೆ ಇನ್ನೂ ನಾಜೂಕಾದರೆ ಚೆಂಡೆ ಮತ್ತಷ್ಟು ಸೊಗಸಾದೀತು.. ಇನ್ನೇನಿಲ್ಲಪ್ಪ ಚೆನ್ನಾಗೇ ಆಗಿದೆ ಬಿಡು.... ಕೆಲವೊಂದು ಕಡೆ ಸ್ವಲ್ಪ ಹದವರಿತು ಬಾರಿಸಿದರೆ ಎಲ್ಲವೂ ಸರಿಯಾಗಿಬಿಡುತ್ತದೆ...’ ಹೀಗೆ ಚೆನ್ನಾಗಿದೆ ಅನ್ನುತ್ತಲೇ, ಬಲು ನಾಜೂಕಾಗಿ ಕೇಳಿದವನಿಗೆ ನೋವಾಗದಂತೆ ತಪ್ಪುಗಳನ್ನು ತಿಳಿಹೇಳುತ್ತಿದ್ದವರು ನರಸಿಂಹ ಭಟ್.

ಒಮ್ಮೆ ಏನಾಯಿತೆಂದರೆ, ಯಕ್ಷಗಾನದ ಮಧ್ಯೆ ನರಸಿಂಹ ಭಟ್ ಟೀ ಕುಡಿದು ಬರೋಣ ಎಂದು ಅಲ್ಲೇ ಟೆಂಟ್ ಹತ್ತಿರ ಮಾಡಿದ್ದ ತಾತ್ಕಾಲಿಕ ಹೊಟೇಲಿಗೆ ಹೋದರು. ಅಲ್ಲಿ ತನಗೆ ಟೀ ತಂದಿತ್ತ ಹುಡುಗನಲ್ಲಿ ಬಿಸಿ ಬಿಸಿ ಏನಿದೆಯಪ್ಪಾ ಅಂತ ತಿನ್ನುವುದಕ್ಕೆ ಕೇಳಿದರು. ಹುಡುಗ ಭಟ್ಟರನ್ನು ತಮಾಷೆ ಮಾಡೋಣ ಅಂತ ಅಲ್ಲಿದ್ದವರ ಮುಂದೆ ದೊಡ್ಡದಾಗಿ ‘ಬಿಸಿ ಬಿಸಿ ಕೆಂಡ ಇದೆ’ ಅಂದ. ನೆರೆದಿದ್ದವರು ನಕ್ಕರು. ಆದರೆ ವಿಚಲಿತರಾಗದ ನರಸಿಂಹ ಭಟ್ ನಸುನಗುತ್ತಾ ‘ಸರಿ ಅದನ್ನೇ ತಾರಪ್ಪಾ..’ ಅನ್ನಬೇಕೇ? ಹುಡುಗನಿಗೆ ಅವಮಾನವಾದಂತಾಯಿತು. ಆದರೂ ಅದನ್ನು

**26ನೇ ಪುಟಕ್ಕೆ....**

# ಯಕ್ಷಗಾನ ಕಾರ್ಯಗಾರ ಮತ್ತು ಪಾಠಪಟ್ಟಿ

**ಅಂಗಳದ ಮಾತು ತಿಂಗಳ ಚರ್ಚೆ**

***(ಕಳೆದ ಸಂಚಿಕೆಯಲ್ಲಿ ಸುಳ್ಯದಲ್ಲಿ ನಡೆದ ಯಕ್ಷಗಾನ ಕಾರ್ಯಾಗಾರದ ಬಗ್ಗೆ ವಿವರಣಾತ್ಮಕ ಲೇಖನ ಪ್ರಕಟಗೊಂಡಿತ್ತು. ಮತ್ತು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಮೂಲಕ ನಡೆಸಲಾಗುವ ಸಂಗೀತ, ನೃತ್ಯ ಪರೀಕ್ಷೆಗಳ ಮಾದರಿಯಲ್ಲೇ ಯಕ್ಷಗಾನದ ಏಳಿಗೆಗೂ ಪರೀಕ್ಷೆಗಳನ್ನು ನಡೆಸುವ ಮತ್ತು ಅದಕ್ಕೆ ಅಗತ್ಯವಿರುವ ಪರೀಕ್ಷಾ ಪಠ್ಯ ತಯಾರಿಕೆಯ ಕುರಿತಂತೆ ಚರ್ಚೆಗಳಿಗೆ ಆಹ್ವಾನ ನೀಡಲಾಗಿತ್ತು. ಆ ಪೈಕಿ ಬಂದ ಪ್ರತಿಕ್ರಿಯೆಗಳನ್ನು ಈ ಸಂಚಿಕೆಯಿಂದ ಪ್ರಕಟಿಸಲಾಗುತ್ತಿದೆ. ಭವಿಷ್ಯದ ಸಂಚಿಕೆಗಳಲ್ಲೂ ಈ ಕುರಿತಂತೆ ಮುಕ್ತ ಸಂವಾದಕ್ಕೆ, ವಾದ–ಪ್ರತಿವಾದಗಳಿಗೆ ಓದುಗರಿಗೆ ಅವಕಾಶವಿದೆ. ನಿಮ್ಮ ಅನಿಸಿಕೆ, ಅಭಿಪ್ರಾಯಗಳು ವಿಚಾರಗಳನ್ನು ಮಂಥಿಸಲಿ.)***

**ಸು**ಳ್ಯದಲ್ಲಿ ಯಕ್ಷಗಾನ ಅಕಾಡೆಮಿಯ ವತಿಯಿಂದ ಶಿಕ್ಷಣದಲ್ಲಿ ಯಕ್ಷಗಾನವನ್ನು ಸಂಯೋಜಿಸುವ ಉದ್ದೇಶದ ಕಾರ್ಯಗಾರ ನಡೆದಿದೆ. ಈ ನಡುವೆ ಯಕ್ಷಗಾನ ಪಾಠಪಟ್ಟಿಯ ಕರಡುಪ್ರತಿಯೂ ಸಿದ್ಧವಾಗಿ ಅದು ಅಧ್ಯಕ್ಷರ ಕೈ ಸೇರಿದೆ. ನಂತರ ಎರಡು ದಿನಗಳಲ್ಲಿ (ಮಾರ್ಚ್ 9 ಮತ್ತು 10) ಅದು ತಜ್ಞ ಕಲಾವಿದರಿಂದ ಪರಿಷ್ಕರಣೆಗೊಂಡಿದೆ ಎಂಬುದಾಗಿಯೂ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಕುರಿತಂತೆ ಒಂದಷ್ಟು ಪ್ರಶ್ನೆಗಳೂ ಉಳಿದಿದೆ.

ಮುಖ್ಯವಾಗಿ ಭಾಗವಹಿಸಿದ ಆ ತಜ್ಞರು ಯಾರು ಎಂಬುದು ಪ್ರಕಟವಾಗಿಲ್ಲ. ಮತ್ತು ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳಲ್ಲಿ ಯಕ್ಷಗಾನದ ಆಳ–ವಿಸ್ತಾರಗಳನ್ನು ಅನುಭವದಿಂದ ತಿಳಿದ ಕಲಾವಿದರು ಎಷ್ಟಿದ್ದರೋ ಅದೂ ಗೊತ್ತಿಲ್ಲ. ಪ್ರಾತ್ಯಕ್ಷಿಕೆ ಮತ್ತು ಪ್ರಯೋಗಗಳನ್ನು ಮಾಡಿ ವಿಮರ್ಶಿಸದೆ ಕೇವಲ ಒಂದು ದಿನದ ಚರ್ಚೆಯಲ್ಲಿ ಪಾಠಪಟ್ಟಿಯ ಕರಡನ್ನು ಸಿದ್ಧಪಡಿಸುವುದೂ ಸಾಧ್ಯವಿಲ್ಲ. ( ಎರಡು ದಿನಗಳಲ್ಲಿ ಅರ್ಧ ದಿನ ಉದ್ಘಾಟನೆಗೆ ಹಾಗೂ ಅರ್ಧ ದಿನ ಸಮಾರೋಪಕ್ಕೆ ಹೋಗಿದೆ ಎಂಬುದು ನನ್ನ ಅಭಿಪ್ರಾಯ.)

ಅಂದು 'ಪ್ರಯೋಗ' ವೆಂಬ ಹೆಸರಿನಲ್ಲಿ ಪ್ರದರ್ಶಿಸಿದ ಯಕ್ಷಗಾನವೂ ಮಕ್ಕಳ ಹಾಗೂ ಹವ್ಯಾಸಿಗಳ ಪ್ರದರ್ಶನವಾಗಿತ್ತೇ ಹೊರತು ಯಕ್ಷಗಾನದ ವಿವಿಧ ಅಂಗಗಳ ಶಾಸ್ತ್ರೀಯತೆಯನ್ನು ಪರಿಚಯಿಸುವ ಪ್ರಯತ್ನ ನಡೆಯಲಿಲ್ಲ ಮತ್ತು ಅನೇಕ ಮಂದಿ ಸಂಪನ್ಮೂಲ ವ್ಯಕ್ತಿಗಳು ಅದನ್ನು ನೋಡಲೂ ಇಲ್ಲ ಎಂಬುದು ನಾನು ಕಂಡುಕೊಂಡ ವಿಚಾರ. ಇನ್ನೀಗ ಶಿಕ್ಷಣ ಇಲಾಖೆಯೊಳಗೆ ಇದೇ ಪಾಠಪಟ್ಟಿಯನ್ನು ತುರುಕಿಸಿ ಯಕ್ಷಗಾನದಲ್ಲಿ ಪರೀಕ್ಷೆಗಳನ್ನು ನಡೆಸಿ ಸರ್ಟಿಫಿಕೇಟನ್ನು ಕೊಡುವ ಹಾಗೂ ಅದಕ್ಕೊಂದು ಘಟಿಕೋತ್ಸವವನ್ನು ಮಾಡುವ ಕಾರ್ಯವೂ ನಡೆದೀತು. ಆದರೆ ಈ ಬಗ್ಗೆ ಸರಕಾರವೂ ಯಕ್ಷಗಾನ ಅಕಾಡೆಮಿಯೂ ಎಚ್ಚರ ವಹಿಸಬೇಕು.

ಇನ್ನೊಂದು ಮುಖ್ಯ ವಿಚಾರವೆಂದರೆ ಯಕ್ಷಗಾನವು ಒಂದು ಸಮಗ್ರ ಕಲೆ. ಇದನ್ನು ವಿಭಜಿಸಿ





ಐದು ಗುಂಪುಗಳಲ್ಲಿ ಚರ್ಚೆ ನಡೆಸಿದ ಶಿಕ್ಷಕರ ತರಬೇತಿಯ ಟೆಕ್ನಿಕ್ ಆಕರ್ಷಕವೆನ್ನಿಸಿರಬಹುದು. ಆದರೆ ಅದು ಯಕ್ಷಗಾನದ ಪಾಠಪಟ್ಟಿಯ ತಯಾರಿಗೆ ಅಪಾಯಕಾರಿಯಾದೀತೆಂಬುದು ನನ್ನ ಅನಿಸಿಕೆ. ಏಕೆಂದರೆ ಪ್ರಸಂಗ ಒಂದು ಕಡೆ, ನಾಟ್ಯ ಇನ್ನೊಂದು ಕಡೆ, ಅರ್ಥಗಾರಿಕೆ ಮತ್ತೊಂದು ಕಡೆ, ಹಿಮ್ಮೇಳ ಮಗುದೊಂದು ಕಡೆ ಹೀಗೆ ಚರ್ಚೆಯಾದರೆ ಅದು ವಿಭಜನಾತ್ಮಕ ಚಿಂತನೆಯಾಗುತ್ತದಷ್ಟೇ ಅಲ್ಲದೆ ಸಮಗ್ರ ಚರ್ಚೆಗೆ ತಡೆಗಳನ್ನು ನಿರ್ಮಿಸಿದಂತಾಗುವುದಿಲ್ಲವೇ?

ಯಕ್ಷಗಾನ ಪಾಠಪಟ್ಟಿಯ ತಯಾರಿಗೆ ಸಮಗ್ರ ಚಿಂತನೆಯ ಸಮೀಪನದೊಂದಿಗೆ ಕೆಲವು ರಾತ್ರೆಗಳಲ್ಲಿ ತಜ್ಞ ಕಲಾವಿದರು ಕುಳಿತು ಪ್ರಾತ್ಯಕ್ಷಿಕೆ–ಪ್ರಯೋಗಗಳೊಂದಿಗೆ ದೊಡ್ಡ ಕಾರ್ಯಗಾರವೇ ನಡೆಯಬೇಕಾಗಿದೆ. ಅದನ್ನು ಏರ್ಪಡಿಸಲು ಯಕ್ಷಗಾನದ ಅನುಭವವಿದ್ದ ಶಿಬಿರ ಸಂಯೋಜಕರು ಇರಬೇಕು ಎಂಬುದು ನನ್ನ ಅಭಿಪ್ರಾಯ.

ಬಾಲ್ಯದಿಂದಲೂ ಯಕ್ಷಗಾನವನ್ನೇ ಉಸಿರಾಡಿದ ಶ್ರೀ ಬಲಿಪ ಭಾಗವತರು, ಕೋಳ್ಯೂರು ರಾಮಚಂದ್ರ ರಾಯರು, ಚಿಪ್ಪಾರು ಕೃಷ್ಣಯ್ಯ ಬಲ್ಲಾಳರು, ಗೋಪಾಲಕೃಷ್ಣ ಕುರುಪ್‌ರವರು, ಪದ್ಯಾಣ ಶಂಕರನಾರಾಯಣ ಭಟ್ಟರು, ಪದ್ಯಾಣ ಗಣಪತಿ ಭಟ್ಟರು ಇನ್ನೂ ಮುಂತಾಗಿ ಅನೇಕ ಹಿರಿಯ ಕಲಾವಿದರು ಪಠ್ಯರಚನೆಗೆ ಮಾರ್ಗದರ್ಶನ ಕೊಡಬಲ್ಲವರಿದ್ದಾರೆ. ಇವರಲ್ಲದೆ ಯಕ್ಷಗಾನ ಕಾರ್ಯಕ್ರಮಗಳಲ್ಲಿ ಅನೇಕ ರಾತ್ರೆಗಳನ್ನು ಹಗಲು ಮಾಡಿದ ಡಾ. ಎಂ ಪ್ರಭಾಕರ ಜೋಶಿ, ಹಿಮ್ಮೇಳ ಮುಮ್ಮೇಳ ಹಾಗೂ ನೇಪಥ್ಯಗಳ ಪೂರ್ಣ ಅನುಭವವಿರುವ ಡಾ. ರಾಘವ ನಂಬಿಯಾರ್ ಮುಂತಾದವರು ಅಕಾಡೆಮಿಕ್ ಆಗಿದ್ದುಕೊಂಡು ಕಲಾವಿದರ ನೇರ ಸಂವಹನವುಳ್ಳವರು. ಅವರು ಈಗಾಗಲೇ ನಡೆಸಿದ ಅಧ್ಯಯನಗಳು ಪ್ರಕಟವಾಗಿದೆ. ಅಲ್ಲದೆ ಪದ್ಯ ಆಕರ ಗ್ರಂಥಗಳಾಗಿ ಲಭ್ಯವಿರುವ ಅನೇಕ ಕೃತಿಗಳನ್ನು ಹಿರಿಯ ಕಲಾವಿದರು ಬರೆದಿದ್ದಾರೆ. ನನ್ನಲ್ಲೇ ಅನೇಕ ಪುಸ್ತಕಗಳಿವೆ. ಹೀಗೆ ಕಲಾವಿದ ವಿಮರ್ಶಕರನ್ನೂ ಒಳಗೊಂಡು ಆಕರ ಗ್ರಂಥಗಳನ್ನೊದಗಿಸಿಯೇ ಪಾಠಪಟ್ಟಿಯನ್ನು ರಚಿಸಬೇಕಾದದ್ದು ಅಗತ್ಯ.

**– ಡಾ. ಚಂದ್ರಶೇಖರ ದಾಮ್ಲೆ,**
ಸಮಾಜಶಾಸ್ತ್ರ ಉಪನ್ಯಾಸಕರು ಮತ್ತು ಸ್ನೇಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು.,ಸುಳ್ಯ, ದ.ಕ

---

(.... 24ನೇ ಪುಟದಿಂದ)

## ಕೆಂಡ ತಂದಿಟ್ಟರೂ...

ತೋರ್ಪಡಿಸಿಕೊಳ್ಳದೆ, ಭಟ್ಟರ ಮುಂದೆ ಸೋಲಬಾರದೆಂದು ನೇರ ಒಳಗೆ ಹೋಗಿ ತಟ್ಟೆಯೊಂದರಲ್ಲಿ ಕೆಂಡವನ್ನಿಕ್ಕಿ ಭಟ್ಟರ ಮುಂದೆ ತಂದಿಟ್ಟ. ಸದಾ ತಾಳ್ಮೆಯಿಂದಿರುವ ಭಟ್ ಈಗ ಆ ಹುಡುಗನಿಗೆ ಖಂಡಿತಾ ಬೈತಾರೆ ಅಂತ ನೆರೆದಿದ್ದವರೆಲ್ಲಾ ಅಂದುಕೊಂಡರೆ, ಭಟ್ಟರು ನಸುನಗುತ್ತಲೇ ಇದ್ದರು!

ಉಳಿದಿದ್ದ ತುಸು ಟೀಯನ್ನು ಕುಡಿದು ಮುಗಿಸಿದ ಭಟ್, ಮೆಲ್ಲ ಕಿಸೆಯಿಂದ ಬೀಡಿಯೊಂದನ್ನು ತೆಗೆದು ತುಟಿಯಲ್ಲಿರಿಸಿ ಆ ಹುಡುಗ ತಂದಿಟ್ಟ ಕೆಂಡದಲ್ಲಿ ಉರಿಸಿ ಧಮ್ ಬಿಡುತ್ತಾ ಟೀಯ ಹಣ ಕೊಟ್ಟು 'ಇನ್ನು ಕೆಂಡ ಒಳಗೆ ತೆಗೆದುಕೊಂಡು ಹೋಗಪ್ಪಾ' ಎಂದು ಸೌಮ್ಯವಾಗಿಯೇ ಹೇಳಿ ನಿಧಾನವಾಗಿ ಹೊರನಡೆದರು.

ಹುಡುಗ ದಿಗ್ಭ್ರಮೆಯಿಂದ ನೋಡುತ್ತಲೇ ಇದ್ದ....!!!